



(ಅವತೀರ್ಣ - ಮಕ್ಕಾದಲ್ಲಿ)

بِسْمِ اللّٰهِ الرَّحْمٰنِ الرَّحِيْمِ ○

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

طٓسٓمّٓ ﴿١﴾

1. ತಾ ಸೀನ್ ಮೀಮ್.

تِلْكَ اٰيٰتُ الْكِتٰبِ الْمُبِيْنِ ﴿٢﴾

2. ಇವು ಸುಸ್ಪಷ್ಟ ಗ್ರಂಥದ ಸೂಕ್ತಗಳಾಗಿವೆ.[1]

لَعَلَّكَ بَاخِعٌ نَّفْسَكَ اَلَّا يَكُوْنُوْا مُؤْمِنِيْنَ ﴿٣﴾

3. ಸಂದೇಶವಾಹಕರೇ, ಇವರು ಸತ್ಯವಿಶ್ವಾಸವನ್ನು ಸ್ವೀಕರಿಸುವುದಿಲ್ಲವೆಂಬ ವ್ಯಥೆಯಿಂದ ಪ್ರಾಯಶಃ ನೀವು ನಿಮ್ಮ ಜೀವವನ್ನೇ ಸೊರಗಿಸಿಕೊಳ್ಳುವಿರಿ.

اِنْ نَّشَاْ نُنَزِّلْ عَلَيْهِمْ مِّنَ السَّمَآءِ اٰيَةً فَظَلَّتْ اَعْنَاقُهُمْ لَهَا خٰضِعِيْنَ ﴿٤﴾

4. ನಾವಿಚ್ಛಿಸಿದರೆ ಇವರ ಕೊರಳುಗಳನ್ನು ಬಾಗಿಸಿ ಬಿಡುವಂತಹ ನಿದರ್ಶನವನ್ನು ಆಕಾಶದಿಂದ ಇಳಿಸಬಲ್ಲೆವು.[2]

وَمَا يَاْتِيْهِمْ مِّنْ ذِكْرٍ مِّنَ الرَّحْمٰنِ مُحْدَثٍ اِلَّا كَانُوْا عَنْهُ مُعْرِضِيْنَ ﴿٥﴾

5. ಇವರ ಬಳಿಗೆ ರಹ್ಮಾನನ ಕಡೆಯಿಂದ ಬರುವ ಪ್ರತಿಯೊಂದು ಹೊಸ ಉಪದೇಶದಿಂದ ಇವರು ವಿಮುಖರಾಗುತ್ತಾರೆ.

فَقَدْ كَذَّبُوْا فَسَيَاْتِيْهِمْ اَنْۢبٰٓؤُا مَا كَانُوْا بِهٖ يَسْتَهْزِءُوْنَ ﴿٦﴾

6. ಈಗ ಇವರು ಸುಳ್ಳಾಗಿಸಿ ಬಿಟ್ಟಿರುವುದರಿಂದ, ಯಾವುದನ್ನಿವರು ಅಪಹಾಸ್ಯ ಮಾಡುತ್ತಿರುವರೋ ಅದರ ವಾಸ್ತವಿಕತೆಯು ಇವರಿಗೆ ಸದ್ಯವೇ (ನಾನಾ ರೂಪಗಳಲ್ಲಿ) ತಿಳಿದು ಬರಲಿದೆ.

---

1. ಅರ್ಥಾತ್- ತನ್ನ ಇಂಗಿತವನ್ನು ಅತ್ಯಂತ ಸ್ಪಷ್ಟವಾಗಿ ವಿವರಿಸುವ ಗ್ರಂಥದ ಸೂಕ್ತಗಳು. ಅದನ್ನು ಓದುವ ಅಥವಾ ಕೇಳುವ ಪ್ರತಿಯೊಬ್ಬ ವ್ಯಕ್ತಿಗೂ ಅದು ಯಾವುದರ ಕಡೆಗೆ ಕರೆಯುತ್ತದೆ, ಯಾವುದರಿಂದ ತಡೆಯುತ್ತದೆ, ಯಾವುದನ್ನು ಸತ್ಯವೆಂದು ಸಾರುತ್ತದೆ ಹಾಗೂ ಯಾವುದನ್ನು ಮಿಥ್ಯವೆನ್ನುತ್ತದೆ ಎಂದು ತಿಳಿಯುತ್ತದೆ. ಅದನ್ನು ನಂಬುವುದು ಅಥವಾ ನಂಬದಿರುವುದು ಬೇರೆ ವಿಷಯ. ಆದರೆ ಅದರ ಬೋಧನೆ ತಿಳಿಯಲಿಲ್ಲ ಅಥವಾ ಅದು ಯಾವ ವಿಷಯವನ್ನು ಅಂಗೀಕರಿಸುವ ಮತ್ತು ಯಾವುದನ್ನು ಬಿಟ್ಟುಬಿಡುವ ಕರೆ ಕೊಡುತ್ತದೆ ಎಂದು ವ್ಯಕ್ತವಾಗಲಿಲ್ಲ ಎಂಬ ನೆಪವನ್ನು ಯಾವ ವ್ಯಕ್ತಿಯೂ ಮುಂದಿಡುವಂತಿಲ್ಲ.
2. ಅರ್ಥಾತ್- ಸಮಸ್ತ ಸತ್ಯನಿಷೇಧಿಗಳು ಸತ್ಯವಿಶ್ವಾಸ ಮತ್ತು ಅನುಸರಣೆಯ ಧೋರಣೆ ಕೈಗೊಳ್ಳಲು ನಿರ್ಬಂಧಿತರಾಗಿ ಬಿಡುವಂತಹ ದೃಷ್ಟಾಂತವನ್ನು ಇಳಿಸಿ ಬಿಡುವುದು ಅಲ್ಲಾಹನ ಪಾಲಿಗೆ ತ್ರಾಸದಾಯಕವೇನಲ್ಲ. ಆದರೆ ಅವನು ಹಾಗೆ ಮಾಡುವುದಿಲ್ಲ. ಅದಕ್ಕೆ ಕಾರಣ ಅವನಿಗದರ ಸಾಮರ್ಥ್ಯವಿಲ್ಲವೆಂಬುದಲ್ಲ. ಬದಲಾಗಿ ಯಾರೂ ಒತ್ತಾಯಪೂರ್ವಕ ವಿಶ್ವಾಸ ಸ್ವೀಕರಿಸುವ ಅಗತ್ಯ ಅವನಿಗಿಲ್ಲ ಎಂಬುದು ಮಾತ್ರವಾಗಿದೆ.

7. ನಾವು ಎಷ್ಟೊಂದು ಅಧಿಕ ಪ್ರಮಾಣದಲ್ಲಿ ಎಲ್ಲ ವಿಧದ ಅತ್ಯುತ್ತಮ ಸಸ್ಯಗಳನ್ನು ಸೃಷ್ಟಿಸಿದ್ದೇವೆ ಎಂಬುದನ್ನು ಇವರು ಭೂಮಿಯಲ್ಲಿ ಎಂದಾದರೂ ಕಂಡಿಲ್ಲವೇ?

أَوَلَمْ يَرَوْا إِلَى الْأَرْضِ كَمْ أَنْبَتْنَا
فِيهَا مِنْ كُلِّ زَوْجٍ كَرِيمٍ ٧

8. ನಿಶ್ಚಯವಾಗಿಯೂ ಇದರಲ್ಲೊಂದು ನಿದರ್ಶನವಿದೆ.[3] ಆದರೆ ಇವರಲ್ಲಿ ಹೆಚ್ಚಿನವರು ವಿಶ್ವಾಸವಿರಿಸುವವರಲ್ಲ.

إِنَّ فِي ذَٰلِكَ لَآيَةً ۖ وَمَا كَانَ
أَكْثَرُهُمْ مُؤْمِنِينَ ٨

9. ವಾಸ್ತವದಲ್ಲಿ ನಿಮ್ಮ ಪ್ರಭು ಪ್ರಬಲನೂ ಕರುಣಾನಿಧಿಯೂ ಆಗಿರುವನು.[4]

وَإِنَّ رَبَّكَ لَهُوَ الْعَزِيزُ الرَّحِيمُ ٩

10. ನಿನ್ನ ಪ್ರಭು ಮೂಸಾರನ್ನು ಕೂಗಿ ಕರೆದು, "ಅಕ್ರಮಿ ಜನಾಂಗದ ಕಡೆಗೆ ಹೋಗು-

وَإِذْ نَادَىٰ رَبُّكَ مُوسَىٰ أَنِ ائْتِ
الْقَوْمَ الظَّالِمِينَ ١٠

11. ಫಿರ್‌ಔನನ ಜನಾಂಗದ ಕಡೆಗೆ- ಅವರು ಭಯಪಡುವುದಿಲ್ಲವೇ?" ಎಂದು ಹೇಳಿದ ವೃತ್ತಾಂತವನ್ನು ಇವರಿಗೆ ತಿಳಿಸಿರಿ.

قَوْمَ فِرْعَوْنَ ۚ أَلَا يَتَّقُونَ ١١

12. ಆಗ ಅವರು, "ನನ್ನ ಪ್ರಭೂ, ಅವರು ನನ್ನನ್ನು ಸುಳ್ಳಾಗಿಸಿ ಬಿಡುವರೆಂಬ ಭಯ ನನಗಿದೆ.

قَالَ رَبِّ إِنِّي أَخَافُ أَنْ يُكَذِّبُونِ ١٢

13. ನನ್ನ ಹೃದಯ ಮುದುಡುತ್ತಿದೆ. ನನ್ನ ನಾಲಿಗೆ ಚಲಿಸುವುದಿಲ್ಲ. ನೀನು ಹಾರೂನರ ಬಳಿಗೆ ಸಂದೇಶವಾಹಕತ್ವವನ್ನು ಕಳುಹಿಸು.

وَيَضِيقُ صَدْرِي وَلَا يَنْطَلِقُ لِسَانِي
فَأَرْسِلْ إِلَىٰ هَارُونَ ١٣

14. ಅವರ ಬಳಿ ನನ್ನ ಮೇಲೆ ಒಂದು ಅಪರಾಧದ ಆರೋಪವೂ ಇದೆ. ಆದುದರಿಂದ ಅವರು ನನ್ನನ್ನು ವಧಿಸಿ ಬಿಡುವರೆಂದು ನಾನು ಹೆದರುತ್ತೇನೆ" ಎಂದು ಭಿನ್ನವಿಸಿದರು.

وَلَهُمْ عَلَيَّ ذَنْبٌ فَأَخَافُ أَنْ يَقْتُلُونِ ١٤

15. ಆಗ ಅಲ್ಲಾಹನು, "ಖಂಡಿತ ಇಲ್ಲ, ನೀವಿಬ್ಬರೂ ನಮ್ಮ ನಿದರ್ಶನಗಳನ್ನು ತೆಗೆದುಕೊಂಡು ಹೋಗಿರಿ. ನಾವು ನಿಮ್ಮೊಂದಿಗಿದ್ದು ಎಲ್ಲವನ್ನೂ ಆಲಿಸುತ್ತಿರುವೆವು.

قَالَ كَلَّا ۖ فَاذْهَبَا بِآيَاتِنَا ۖ إِنَّا مَعَكُمْ
مُسْتَمِعُونَ ١٥

3. ಅರ್ಥಾತ್- ಸತ್ಯಶೋಧನೆಗಾಗಿ ಯಾರಾದರೂ ದೃಷ್ಟಾಂತವನ್ನೇ ನೋಡಬೇಕಿದ್ದರೆ ಅದಕ್ಕಾಗಿ ಅವನು ದೂರ ಹೋಗಬೇಕಾಗಿಲ್ಲ. ಅವನು ಕಣ್ತೆರೆದು ಭೂಮಿಯ ಸಸ್ಯಶ್ಯಾಮಲತೆಯನ್ನೊಮ್ಮೆ ನೋಡಲಿ. ನಿಸರ್ಗ ವ್ಯವಸ್ಥೆಯ ಬಗ್ಗೆ ಪ್ರವಾದಿಗಳು ಸಮರ್ಪಿಸುವ ಏಕದೇವತ್ವದ ವಾಸ್ತವಿಕತೆ ಸರಿಯೋ ಅಥವಾ ಬಹುದೇವಾರಾಧಕರು ಹಾಗೂ ದೇವಧಿಕ್ಕಾರಿಗಳು ವಿವರಿಸುವ ಸಿದ್ಧಾಂತಗಳೋ ಎಂದು ಅವರಿಗೆ ತಿಳಿದು ಬರುವುದು.

4. ಅರ್ಥಾತ್- ಅವನು ಎಷ್ಟು ಸಮರ್ಥನೆಂದರೆ ಯಾರನ್ನಾದರೂ ಶಿಕ್ಷಿಸಬಯಸಿದರೆ ಕ್ಷಣಾರ್ಧದಲ್ಲಿ ನಾಶಗೊಳಿಸಿ ಬಿಡುವನು. ಆದರೂ ಶಿಕ್ಷೆಯನ್ನು ಶೀಘ್ರ ಕೊಡದಿರುವುದು ಅವನ ಕರುಣೆಯ ಫಲವೇ ಆಗಿದೆ. ವರ್ಷಗಟ್ಟಲೆ ಅಥವಾ ಶತಮಾನಗಳ ಕಾಲ ಅವನು ಸಡಿಲು ಧೋರಣೆ ಕೈಗೊಳ್ಳುತ್ತಾನೆ. ಯೋಚಿಸಲು, ತಿಳಿದುಕೊಳ್ಳಲು ಮತ್ತು ಸುಧಾರಿಸಿಕೊಳ್ಳಲು ಅವನು ಕಾಲಾವಕಾಶ ನೀಡುತ್ತಾನೆ. ಅನೇಕ ವರ್ಷಗಳ ಅಚ್ಚೋಲ್ಲಂಘನೆಯನ್ನು ಒಂದು ಕ್ಷಮಾಯಾಚನೆಯ ಪ್ರತಿಯಾಗಿ ಕ್ಷಮಿಸಿ ಬಿಡಲು ಅವನು ಸಿದ್ಧನಿರುತ್ತಾನೆ.

16-17. ಫಿರ್‌ಔನನ ಬಳಿಗೆ ಹೋಗಿರಿ ಮತ್ತು - ನೀನು ಬನೀಇಸ್ರಾಈಲರನ್ನು ನಮ್ಮ ಜೊತೆ ಕಳುಹಿಸಬೇಕೆಂದು ಸರ್ವಲೋಕಗಳ ಪ್ರಭು ನಮ್ಮನ್ನು ರವಾನಿಸಿದ್ದಾನೆ- ಎಂದು ಅವನೊಡನೆ ಹೇಳಿರಿ" ಎಂದನು.

فَأْتِيَا فِرْعَوْنَ فَقُولَآ إِنَّا رَسُولُ رَبِّ ٱلْعَٰلَمِينَ ﴿١٦﴾ أَنْ أَرْسِلْ مَعَنَا بَنِىٓ إِسْرَٰٓءِيلَ ﴿١٧﴾

18. ಫಿರ್‌ಔನನು, "ನಾವು ನಿನ್ನನ್ನು ನಮ್ಮಲ್ಲಿ ಮಗುವಿನಂತೆ ಸಾಕಿರಲಿಲ್ಲವೇ? ನೀನು ನಿನ್ನ ಜೀವಮಾನದ ಅನೇಕ ವರ್ಷಗಳನ್ನು ನಮ್ಮಲ್ಲಿ ಕಳೆದಿರುವೆ.

قَالَ أَلَمْ نُرَبِّكَ فِينَا وَلِيدًا وَلَبِثْتَ فِينَا مِنْ عُمُرِكَ سِنِينَ ﴿١٨﴾

19. ಅನಂತರ ನೀನು ಏನು ಮಾಡಿದೆಯೋ ಅದನ್ನು ಮಾಡಿದೆ. ನೀನು ಮಹಾ ಕೃತಘ್ನನಾಗಿರುವೆ" ಎಂದನು.

وَفَعَلْتَ فَعْلَتَكَ ٱلَّتِى فَعَلْتَ وَأَنتَ مِنَ ٱلْكَٰفِرِينَ ﴿١٩﴾

20. ಆಗ ಮೂಸಾ, "ನಾನು ಆಗ ಆ ಕೃತ್ಯವನ್ನು ಗೊತ್ತಿಲ್ಲದೆ ಮಾಡಿಬಿಟ್ಟಿದ್ದೆ.

قَالَ فَعَلْتُهَآ إِذًا وَأَنَا۠ مِنَ ٱلضَّآلِّينَ ﴿٢٠﴾

21. ಅನಂತರ ನಾನು ನಿಮಗೆ ಹೆದರಿ ಓಡಿ ಹೋದೆ. ಆ ಬಳಿಕ ನನ್ನ ಪ್ರಭು ನನಗೆ ನಿರ್ದೇಶನವನ್ನು ದಯಪಾಲಿಸಿದನು ಮತ್ತು ನನ್ನನ್ನು ಸಂದೇಶವಾಹಕರಲ್ಲಿ ಸೇರಿಸಿಕೊಂಡನು.

فَفَرَرْتُ مِنكُمْ لَمَّا خِفْتُكُمْ فَوَهَبَ لِى رَبِّى حُكْمًا وَجَعَلَنِى مِنَ ٱلْمُرْسَلِينَ ﴿٢١﴾

22. ಇನ್ನು ನೀನು ನನ್ನ ಮೇಲೆ ಉಪಕಾರ ಭಾರವನ್ನಿರಿಸುತ್ತಿರುವ ವಿಷಯ. ಅದರ ವಾಸ್ತವಿಕತೆಯೇನೆಂದರೆ, ನೀನು ಬನೀಇಸ್ರಾಈಲರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದೆ" ಎಂದು ಉತ್ತರಿಸಿದರು.[5]

وَتِلْكَ نِعْمَةٌ تَمُنُّهَا عَلَىَّ أَنْ عَبَّدتَّ بَنِىٓ إِسْرَٰٓءِيلَ ﴿٢٢﴾

23. ಆಗ ಫಿರ್‌ಔನನು, "ಈ ಸರ್ವಲೋಕಗಳ ಪ್ರಭು ಎಂದರೇನು?" ಎಂದು ಕೇಳಿದನು.

قَالَ فِرْعَوْنُ وَمَا رَبُّ ٱلْعَٰلَمِينَ ﴿٢٣﴾

24. (ಆಗ) ಮೂಸಾ, "ಭೂಮಿ - ಆಕಾಶಗಳ ಪ್ರಭು ಮತ್ತು ಭೂಮಿ - ಆಕಾಶಗಳ ನಡುವೆ ಇರುವ ಸಕಲ ವಸ್ತುಗಳ ಪ್ರಭು - ನೀವು ದೃಢ ವಿಶ್ವಾಸವಿರಿಸುವವರಾಗಿದ್ದರೆ" - ಎಂದು ಹೇಳಿದರು.

قَالَ رَبُّ ٱلسَّمَٰوَٰتِ وَٱلْأَرْضِ وَمَا بَيْنَهُمَآ ۖ إِن كُنتُم مُّوقِنِينَ ﴿٢٤﴾

25. ಫಿರ್‌ಔನನು ತನ್ನ ಸುತ್ತಮುತ್ತಲಿದ್ದ ಜನರೊಡನೆ, 'ಕೇಳಿದಿರಾ?' ಎಂದನು.

قَالَ لِمَنْ حَوْلَهُۥٓ أَلَا تَسْتَمِعُونَ ﴿٢٥﴾

5. ನೀನು ಬನೀಇಸ್ರಾಈಲರ ಮೇಲೆ ಅಕ್ರಮವೆಸಗದೆ ಹೋಗಿದ್ದರೆ ನಾನು ನಿನ್ನ ಮನೆಯಲ್ಲಿ ಬೆಳೆಯುವ ಪ್ರಮೇಯವೇ ಎದುರಾಗುತ್ತಿರಲಿಲ್ಲ. ನಿನ್ನ ಅಕ್ರಮಗಳಿಂದಾಗಿಯೇ ನನ್ನ ತಾಯಿಯು ನನ್ನನ್ನು ಬುಟ್ಟಿಯಲ್ಲಿ ಮಲಗಿಸಿ ನದಿಯಲ್ಲಿ ತೇಲಿಸಿ ಬಿಟ್ಟಿದ್ದಳು. ಅನ್ಯಥಾ ನನ್ನ ಪೋಷಣೆಗೆ ತನ್ನ ಮನೆಯೇ ಇರಲಿಲ್ಲವೇ? ಆದ್ದರಿಂದ ಪೋಷಣೆ ಮಾಡಿದ್ದಕ್ಕಾಗಿ ಉಪಕಾರ ಭಾರವಿರಿಸುವುದು ನಿನಗೆ ಶೋಭಿಸುವುದಿಲ್ಲ.

26. (ಆಗ) ಮೂಸಾ - "ನಿಮ್ಮ ಪ್ರಭುವೂ ಗತಿಸಿ ಹೋಗಿರುವ ನಿಮ್ಮ ಪೂರ್ವಿಕರ ಪ್ರಭುವೂ" ಎಂದರು.

قَالَ رَبُّكُمْ وَرَبُّ اٰبَآئِكُمُ الْاَوَّلِيْنَ ﴿٢٦﴾

27. ಫಿರ್‌ಔನನು (ನೆರೆದಿದ್ದ ಜನರೊಡನೆ)- "ನಿಮ್ಮ ಕಡೆಗೆ ರವಾನಿಸಲ್ಪಟ್ಟಿರುವ ಈ ರಸೂಲರು ಸಂಪೂರ್ಣ ಹುಚ್ಚರಾಗಿರುವಂತೆ ತೋರುತ್ತದೆ" ಎಂದನು.

قَالَ اِنَّ رَسُوْلَكُمُ الَّذِيْٓ اُرْسِلَ اِلَيْكُمْ لَمَجْنُوْنٌ ﴿٢٧﴾

28. (ಆಗ) ಮೂಸಾ, "ಪೂರ್ವ ಪಶ್ಚಿಮ ಮತ್ತು ಅವೆರಡರ ನಡುವೆ ಇರುವ ಎಲ್ಲವುಗಳ ಪ್ರಭು- ನೀವು ಒಂದಿಷ್ಟು ಬುದ್ಧಿಯುಳ್ಳವರಾಗಿದ್ದರೆ!" ಎಂದರು.

قَالَ رَبُّ الْمَشْرِقِ وَالْمَغْرِبِ وَمَا بَيْنَهُمَا ؕ اِنْ كُنْتُمْ تَعْقِلُوْنَ ﴿٢٨﴾

29. ಆಗ ಫಿರ್‌ಔನನು, "ನೀನು ನನ್ನ ಹೊರತು ಇತರ ಯಾರನ್ನಾದರೂ ಆರಾಧ್ಯನಾಗಿ ಒಪ್ಪಿ ಕೊಂಡರೆ ನಿನ್ನನ್ನೂ ಸೆರೆಮನೆಗಳಲ್ಲಿ ಕೊಳೆಯುತ್ತಿರುವವರೊಂದಿಗೆ ಸೇರಿಸಿ ಬಿಡುವೆನು" ಎಂದು ಹೇಳಿದನು.

قَالَ لَئِنِ اتَّخَذْتَ اِلٰهًا غَيْرِيْ لَاَجْعَلَنَّكَ مِنَ الْمَسْجُوْنِيْنَ ﴿٢٩﴾

30. ಆಗ ಮೂಸಾ, "ನಾನು ನಿನ್ನ ಮುಂದೆ ಒಂದು ಸುಸ್ಪಷ್ಟ ವಸ್ತುವನ್ನು ತಂದರೂ?" ಎಂದು ಕೇಳಿದರು.

قَالَ اَوَلَوْ جِئْتُكَ بِشَيْءٍ مُّبِيْنٍ ﴿٣٠﴾

31. ಆಗ ಫಿರ್‌ಔನನು, "ಸರಿ, ನೀನು ಸತ್ಯವಾದಿಯಾಗಿದ್ದರೆ ಅದನ್ನು ಮುಂದೆ ತಾ" ಎಂದನು.

قَالَ فَاْتِ بِهٖٓ اِنْ كُنْتَ مِنَ الصّٰدِقِيْنَ ﴿٣١﴾

32. (ಅವನ ಬಾಯಿಯಿಂದ ಈ ಮಾತು ಹೊರ ಬಿದ್ದೊಡನೆ) ಮೂಸಾ ತಮ್ಮ ಲಾಠಿಯನ್ನು ಎಸೆದರು ಮತ್ತು ಅದು ಹಠಾತ್ತನೆ ಒಂದು ಪ್ರತ್ಯಕ್ಷ ಹೆಬ್ಬಾವಾಗಿತ್ತು.

فَاَلْقٰى عَصَاهُ فَاِذَا هِيَ ثُعْبَانٌ مُّبِيْنٌ ﴿٣٢﴾

33. ತರುವಾಯ ಅವರು ತಮ್ಮ ಹಸ್ತವನ್ನು (ಬಗಲಿನಿಂದ) ಹೊರಕ್ಕೆಳೆದರು ಮತ್ತು ಅದು ಪ್ರೇಕ್ಷಕರ ಮುಂದೆ ಪ್ರಜ್ವಲಿಸುತ್ತಿತ್ತು.[6]

وَّنَزَعَ يَدَهٗ فَاِذَا هِيَ بَيْضَآءُ لِلنّٰظِرِيْنَ ﴿٣٣﴾ ع ٢

34. ಫಿರ್‌ಔನನು ತನ್ನ ಸುತ್ತಮುತ್ತಲಿದ್ದ ಸರದಾರರೊಡನೆ, "ಈತನು ಖಂಡಿತವಾಗಿಯೂ ಒಬ್ಬ ನುರಿತ ಜಾದುಗಾರ.

قَالَ لِلْمَلَاِ حَوْلَهٗٓ اِنَّ هٰذَا لَسٰحِرٌ عَلِيْمٌ ﴿٣٤﴾

35. ತನ್ನ ಜಾದುವಿನ ಬಲದಿಂದ ನಿಮ್ಮನ್ನು ನಿಮ್ಮ ದೇಶದಿಂದ

يُّرِيْدُ اَنْ يُّخْرِجَكُمْ مِّنْ اَرْضِكُمْ

6. ಹ.ಮೂಸಾ(ಅ) ತಮ್ಮ ಬಗಲಿನಿಂದ ಕೈಯನ್ನು ಹೊರತೆಗೆದ ತಕ್ಷಣ ಹಠಾತ್ತನೆ ಸಮಸ್ತ ವಾತಾವರಣ ಪ್ರಜ್ವಲಿಸಿತು. ಸೂರ್ಯ ಮೂಡಿ ಬಂತೇ ಎಂದು ಭಾಸವಾಯಿತು.

ಹೊರಗಟ್ಟಬಯಸುತ್ತಾನೆ.[7] ಈಗ ನಿಮ್ಮದೇನು ಅಪ್ಪಣೆ?" ಎಂದನು.

بِسِحْرِهٖ فَمَاذَا تَاْمُرُوْنَ ۝٣٥

36. ಆಗ ಅವರು, "ಇವನನ್ನೂ, ಇವನ ಸಹೋದರನನ್ನೂ ತಡೆದಿರಿಸಿ ಕೊಳ್ಳಿರಿ-

قَالُوْٓا اَرْجِهْ وَاَخَاهُ وَابْعَثْ فِى
الْمَدَآئِنِ حٰشِرِيْنَ ۝٣٦

37. ಮತ್ತು ಸಕಲ ನುರಿತ ಜಾದುಗಾರರನ್ನು ತಮ್ಮ ಬಳಿಗೆ ಕರೆತರಲಿಕ್ಕಾಗಿ ನಗರಗಳಿಗೆ ಹರಿಕಾರರನ್ನು ಕಳುಹಿಸಿ ಬಿಡಿರಿ" ಎಂದರು.

يَاْتُوْكَ بِكُلِّ سَحَّارٍ عَلِيْمٍ ۝٣٧

38. ಆ ಪ್ರಕಾರ ಒಂದು ದಿನ ನಿಶ್ಚಿತ ಸಮಯದಲ್ಲಿ ಜಾದುಗಾರರು ಒಟ್ಟುಗೂಡಿಸಲ್ಪಟ್ಟರು-

فَجُمِعَ السَّحَرَةُ لِمِيْقَاتِ يَوْمٍ مَّعْلُوْمٍ ۝٣٨

39. ಮತ್ತು ಜನರೊಡನೆ, "ನೀವು ಸಮ್ಮೇಳನಕ್ಕೆ ಬರುತ್ತೀರಾ?

وَّقِيْلَ لِلنَّاسِ هَلْ اَنْتُمْ مُّجْتَمِعُوْنَ ۝٣٩

40. ಜಾದುಗಾರರು ವಿಜಯಿಗಳಾದರೆ ನಾವು ಅವರ ಧರ್ಮದಲ್ಲೇ ಉಳಿಯಬಹುದು" ಎನ್ನಲಾಯಿತು.[8]

لَعَلَّنَا نَتَّبِعُ السَّحَرَةَ اِنْ كَانُوْا
هُمُ الْغٰلِبِيْنَ ۝٤٠

41. ಜಾದುಗಾರರು ರಂಗಕ್ಕಿಳಿದು ಬಂದಾಗ ಅವರು ಫಿರ್‌ಔನನೊಡನೆ, "ನಾವು ವಿಜಯಿಗಳಾದರೆ ನಮಗೆ ಬಹುಮಾನ ಸಿಗಬಹುದಲ್ಲವೇ?" ಎಂದು ಕೇಳಿದರು.

فَلَمَّا جَآءَ السَّحَرَةُ قَالُوْا لِفِرْعَوْنَ
اَئِنَّ لَنَا لَاَجْرًا اِنْ كُنَّا نَحْنُ الْغٰلِبِيْنَ ۝٤١

42. ಅದಕ್ಕೆ ಅವನು, "ಹೌದು, ಆಗಂತೂ ನೀವು ಆಪ್ತರಲ್ಲಿ ಸೇರಿ ಬಿಡುವಿರಿ" ಎಂದನು.

قَالَ نَعَمْ وَاِنَّكُمْ اِذًا لَّمِنَ الْمُقَرَّبِيْنَ ۝٤٢

7. ಎರಡೂ ಪವಾಡಗಳ ಮಹಾನತೆಯನ್ನು ಇದರಿಂದ ಅಂದಾಜಿಸಬಹುದಾಗಿದೆ. ಒಂದು ಕ್ಷಣದ ಮೊದಲು ತನ್ನ ದೇಶದ ವ್ಯಕ್ತಿಯೊಬ್ಬ ಆಸ್ಥಾನದ ಮುಂದೆ ಬಂದು ತನ್ನ ಪ್ರವಾದಿತ್ವ ಮತ್ತು ಬನೀಇಸ್ರಾಈಲರ ವಿಮೋಚನೆಯ ಬೇಡಿಕೆಯನ್ನು ಮುಂದಿರಿಸಿದಾಗ ಫಿರ್‌ಔನ್ ಅವನನ್ನು ಹುಚ್ಚನೆಂದಿದ್ದನು. ಮಾತ್ರವಲ್ಲ ತನ್ನ ಹೊರತು ಇತರರನ್ನು ಆರಾಧ್ಯರೆಂದು ಭಾವಿಸಿದರೆ ಸೆರೆಮನೆಯಲ್ಲಿ ಕೊಳೆಯುವಂತೆ ಮಾಡಿ ಕೊಲ್ಲುವೆನೆಂಬ ಬೆದರಿಕೆಯೊಡ್ಡಿದ್ದನು. ಆದರೆ ಈ ದೃಷ್ಟಾಂತಗಳನ್ನು ಕಂಡ ತಕ್ಷಣ ಅವನಲ್ಲಿ ಎಂತಹ ಭಯವಿಹ್ವಲತೆ ಆವರಿಸಿತೆಂದರೆ ಅವನು ತನ್ನ ಅರಸೊತ್ತಿಗೆ ಮತ್ತು ಸಾಮ್ರಾಜ್ಯ ಕಿತ್ತು ಹೋಗುವ ಅಪಾಯವಿದೆ ಎಂದು ಭಾವಿಸತೊಡಗಿದನು.

8. ಅರ್ಥಾತ್ ಪ್ರಕಟಣೆ ಮತ್ತು ಜಾಹೀರಾತುಗಳಿಗೆ ಸಾಕು ಮಾಡಲಿಲ್ಲ. ಈ ಸ್ಪರ್ಧೆಯನ್ನು ವೀಕ್ಷಿಸಲು ಜನರಿಗೆ ಪ್ರೇರೇಪಣೆ ನೀಡಿ ಕರೆತರಲು ಸಿಬ್ಬಂದಿಗಳನ್ನೂ ಕಳುಹಿಸಲಾಯಿತು. ತುಂಬಿದ ಸಭೆಯಲ್ಲಿ ಹ. ಮೂಸಾ(ಅ) ತೋರಿಸಿದ ಪವಾಡಗಳ ಸುದ್ದಿ ಜನಸಾಮಾನ್ಯರಲ್ಲಿಯೂ ಹರಡಿತ್ತು ಎಂದು ಇದರಿಂದ ವ್ಯಕ್ತವಾಗುತ್ತದೆ. ದೇಶವಾಸಿಗಳು ಇದರಿಂದ ಪ್ರಭಾವಿತರಾಗಿ ಬಿಡಬಹುದೆಂಬ ಭಯ ಫಿರ್‌ಔನನಿಗೆ ಉಂಟಾಯಿತು. ಈ ಪವಾಡಗಳನ್ನು ನೋಡಿದ ಆಸ್ಥಾನದಲ್ಲಿ ಉಪಸ್ಥಿತರಿದ್ದವರ ಹಾಗೂ ಈ ಬಗ್ಗೆ ಅಧಿಕೃತ ವರದಿಗಳು ತಲಪಿದ್ದ ಜನರ, ಪೂರ್ವಜರ ಧರ್ಮದ ಮೇಲಿನ ವಿಶ್ವಾಸದಲ್ಲಿ ಏರುಪೇರುಂಟಾಗತೊಡಗಿತ್ತು. ಮೂಸಾ(ಅ) ಮಾಡಿದಂತಹ ಕೆಲಸವನ್ನು ಜಾದೂಗಾರರೂ ಹೇಗಾದರೂ ಮಾಡಿ ತೋರಿಸುವುದರಲ್ಲೇ ಈಗ ಅವರ ಧಾರ್ಮಿಕ ಶ್ರದ್ಧೆ ಅಧಿಷ್ಠಿತವಾಯಿತು. ಸ್ವತಃ ಫಿರ್‌ಔನ್ ಮತ್ತು ಅವನ ಆಸ್ಥಾನದ ಪ್ರಮುಖರು ಇದನ್ನು ಅತ್ಯಂತ ನಿರ್ಣಾಯಕ ಸ್ಪರ್ಧೆ ಎಂದು ಭಾವಿಸತೊಡಗಿದ್ದರು. ಅವರಿಂದ ಕಳುಹಿಸಲ್ಪಟ್ಟ ಜನರೇ, “ಜಾದೂಗಾರರು ಜಯಶೀಲರಾದರೆ ನಾವು ಮೂಸಾರ ಧರ್ಮವನ್ನು ಸ್ವೀಕರಿಸುವುದು ತಪ್ಪುತ್ತದೆ. ಅನ್ಯಥಾ ನಮ್ಮ ಧರ್ಮ ಮತ್ತು ವಿಶ್ವಾಸಕ್ಕೆ ಉಳಿಗಾಲವಿಲ್ಲ” ಎಂಬ ಭಾವನೆಯನ್ನು ಜನಸಾಮಾನ್ಯರ ಮನದಲ್ಲಿ ಮೂಡಿಸುತ್ತಿದ್ದರು.

43. (ಆಗ) ಮೂಸಾ, "ನೀವು ಎಸೆಯ ಬೇಕಾದುದನ್ನು ಎಸೆಯಿರಿ" ಎಂದರು.

قَالَ لَهُم مُّوسَىٰ أَلْقُوا مَا أَنتُم مُّلْقُونَ ٤٣

44. ಅವರು ತಕ್ಷಣ ತಮ್ಮ ಹಗ್ಗಗಳನ್ನೂ ಲಾಠಿಗಳನ್ನೂ ಎಸೆದರು ಮತ್ತು "ಫಿರ್‌ಔನನ ಪ್ರತಾಪದಿಂದ ನಾವೇ ವಿಜಯಿಗಳಾಗುವೆವು" ಎಂದು ಉದ್ಗರಿಸಿದರು.

فَأَلْقَوْا حِبَالَهُمْ وَعِصِيَّهُمْ وَقَالُوا بِعِزَّةِ
فِرْعَوْنَ إِنَّا لَنَحْنُ الْغَالِبُونَ ٤٤

45. ತರುವಾಯ ಮೂಸಾ ತಮ್ಮ ಲಾಠಿಯನ್ನು ಎಸೆದಾಗ ಹಠಾತ್ತನೆ ಅದು ಅವರ ಮಿಥ್ಯ ಚಮತ್ಕಾರಗಳನ್ನು ನುಂಗುತ್ತಾ ಸಾಗುತ್ತಿತ್ತು.

فَأَلْقَىٰ مُوسَىٰ عَصَاهُ فَإِذَا هِيَ تَلْقَفُ
مَا يَأْفِكُونَ ٤٥

46. ಆಗ ಎಲ್ಲ ಜಾದುಗಾರರು ತಾವಾಗಿಯೇ ಸಾಷ್ಟಾಂಗವೆರಗಿಬಿಟ್ಟರು-

فَأُلْقِيَ السَّحَرَةُ سَاجِدِينَ ٤٦

47. ಮತ್ತು ಹೀಗೆ ಹೇಳಿದರು, "ನಾವು ನಂಬಿದೆವು- ಸರ್ವಲೋಕಗಳ ಪಾಲಕ ಪ್ರಭುವನ್ನು,

قَالُوا آمَنَّا بِرَبِّ الْعَالَمِينَ ٤٧

48. ಮೂಸಾ ಮತ್ತು ಹಾರೂನರ ಪ್ರಭುವನ್ನು."

رَبِّ مُوسَىٰ وَهَارُونَ ٤٨

49. ಆಗ ಫಿರ್‌ಔನನು, "ನಾನು ನಿಮಗೆ ಅನುಮತಿ ಕೊಡುವುದಕ್ಕೆ ಮುಂಚೆ ನೀವು ಮೂಸಾನ ಮಾತನ್ನು ನಂಬಿದಿರಾ? ಖಂಡಿತ ವಾಗಿಯೂ ಇವನು ನಿಮಗೆ ಜಾದುಗಾರಿಕೆಯನ್ನು ಕಲಿಸಿದ ನಿಮ್ಮ ಹಿರಿಯನಾಗಿದ್ದಾನೆ. ಸರಿ ನಿಮಗೆ ಈಗಲೇ ತಿಳಿಯಲಿದೆ. ನಾನು ನಿಮ್ಮ ಕೈ ಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕಡಿಸುವೆನು ಮತ್ತು ನಿಮ್ಮೆಲ್ಲರನ್ನೂ ಶಿಲುಬೆಗೇರಿಸಿ ಬಿಡುವೆನು" ಎಂದನು.

قَالَ آمَنتُمْ لَهُ قَبْلَ أَنْ آذَنَ لَكُمْ
إِنَّهُ لَكَبِيرُكُمُ الَّذِي عَلَّمَكُمُ السِّحْرَ
فَلَسَوْفَ تَعْلَمُونَ لَأُقَطِّعَنَّ
أَيْدِيَكُمْ وَأَرْجُلَكُم مِّنْ خِلَافٍ
وَلَأُصَلِّبَنَّكُمْ أَجْمَعِينَ ٤٩

50. ಅದಕ್ಕೆ ಅವರು ಹೀಗೆ ಉತ್ತರಿಸಿದರು, "ಪರವಾಗಿಲ್ಲ. ನಾವು ನಮ್ಮ ಪ್ರಭುವಿನ ಸನ್ನಿಧಿಗೆ ತಲುಪಿ ಬಿಡುವೆವು.

قَالُوا لَا ضَيْرَ إِنَّا إِلَىٰ رَبِّنَا مُنقَلِبُونَ ٥٠

51. ನಮ್ಮ ಪ್ರಭು ಪಾಪಗಳನ್ನು ಕ್ಷಮಿಸಿ ಬಿಡುವನೆಂದು ನಮಗೆ ನಿರೀಕ್ಷೆ ಇದೆ. ಏಕೆಂದರೆ ನಾವು ಎಲ್ಲರಿಗಿಂತಲೂ ಮೊದಲು ಸತ್ಯವಿಶ್ವಾಸ ಸ್ವೀಕರಿಸಿದವರಾಗಿದ್ದೇವೆ."

إِنَّا نَطْمَعُ أَن يَغْفِرَ لَنَا رَبُّنَا خَطَايَانَا
أَن كُنَّا أَوَّلَ الْمُؤْمِنِينَ ٥١

52. "ನನ್ನ ದಾಸರನ್ನು ಕರೆದುಕೊಂಡು ರಾತೋರಾತ್ರಿ ಹೊರಟು ಹೋಗಿರಿ. ನಿಮ್ಮನ್ನು ಬೆನ್ನಟ್ಟಲಾಗುವುದು" ಎಂದು ನಾವು ಮೂಸಾರಿಗೆ 'ದಿವ್ಯಬೋಧನೆ' ಕಳುಹಿಸಿದೆವು.[9]

وَأَوْحَيْنَا إِلَىٰ مُوسَىٰ أَنْ أَسْرِ بِعِبَادِي
إِنَّكُم مُّتَّبَعُونَ ٥٢

9. ಇದೀಗ ದೀರ್ಘಕಾಲಿಕ ವೃತ್ತಾಂತವನ್ನು ಬಿಟ್ಟು ಹ.ಮೂಸಾರಿಗೆ(ಅ) ಈಜಿಪ್ಟ್‌ನಿಂದ ವಲಸೆ ಹೋಗುವ ಆದೇಶ ಕೊಡಲಾದ ಸಂದರ್ಭದ ಕುರಿತು ಪ್ರಸ್ತಾಪಿಸಲಾಗುತ್ತಿದೆ.

53. ಆಗ ಫಿರ್‌ಔನನು (ಸೇನೆಗಳನ್ನು ಸಜ್ಜುಗೊಳಿಸಲಿಕ್ಕಾಗಿ) ರಾಜಘೋಷಕರನ್ನು ನಗರಗಳಿಗೆ (ಹೀಗೆ ಹೇಳಿ) ಕಳುಹಿಸಿದನು-

فَأَرْسَلَ فِرْعَوْنُ فِي الْمَدَائِنِ حَاشِرِينَ ﴿٥٣﴾

54. "ಇವರು ಕೇವಲ ಬೆರಳೆಣಿಕೆಯಲ್ಲಿದ್ದಾರೆ-

إِنَّ هَٰؤُلَاءِ لَشِرْذِمَةٌ قَلِيلُونَ ﴿٥٤﴾

55. ಮತ್ತು ಇವರು ನನ್ನನ್ನು ಬಹಳ ಕುಪಿತಗೊಳಿಸಿದ್ದಾರೆ-

وَإِنَّهُمْ لَنَا لَغَائِظُونَ ﴿٥٥﴾

56. ನಾವು ಸದಾ ಜಾಗೃತರಾಗಿರುವಂತಹ ಸಮೂಹವಾಗಿದ್ದೇವೆ."

وَإِنَّا لَجَمِيعٌ حَاذِرُونَ ﴿٥٦﴾

57. ಈ ರೀತಿಯಲ್ಲಿ ನಾವು ಅವರನ್ನು ಅವರ ಉದ್ಯಾನಗಳಿಂದಲೂ ಚಿಲುಮೆಗಳಿಂದಲೂ-

فَأَخْرَجْنَاهُمْ مِنْ جَنَّاتٍ وَعُيُونٍ ﴿٥٧﴾

58. ಖಜಾನೆಗಳಿಂದಲೂ ಅತ್ಯುತ್ತಮ ನಿವಾಸಗಳಿಂದಲೂ ಹೊರ ತಂದೆವು-

وَكُنُوزٍ وَمَقَامٍ كَرِيمٍ ﴿٥٨﴾

59. ಇದು ಅವರ ಮೇಲೆ ಗತಿಸಿದುದಾಯಿತು. (ಇನ್ನೊಂದು ಕಡೆ) ಬನೀಇಸ್ರಾಈಲರನ್ನು ನಾವು ಇವೆಲ್ಲವುಗಳ ಉತ್ತರಾಧಿಕಾರಿಗಳಾಗಿ ಮಾಡಿದೆವು.

كَذَٰلِكَ وَأَوْرَثْنَاهَا بَنِي إِسْرَائِيلَ ﴿٥٩﴾

60. ಬೆಳಗಾಗುತ್ತಲೇ ಇವರು, ಅವರನ್ನು ಬೆನ್ನಟ್ಟಿ ಹೋದರು.

فَأَتْبَعُوهُمْ مُشْرِقِينَ ﴿٦٠﴾

61. ಎರಡು ಸಮೂಹಗಳು ಎದುರಾದಾಗ ಮೂಸಾರ ಸಂಗಾತಿಗಳು, "ನಾವು ಸಿಕ್ಕಿ ಬಿದ್ದೆವು" ಎಂದು ಕೂಗಿದರು.

فَلَمَّا تَرَاءَى الْجَمْعَانِ قَالَ أَصْحَابُ
مُوسَىٰ إِنَّا لَمُدْرَكُونَ ﴿٦١﴾

62. ಆಗ ಮೂಸಾ, "ಖಂಡಿತ ಇಲ್ಲ. ನನ್ನ ಸಂಗಡ ನನ್ನ ಪ್ರಭು ಇದ್ದಾನೆ. ಅವನು ಖಂಡಿತವಾಗಿಯೂ ನನಗೆ ದಾರಿ ತೋರುವನು" ಎಂದರು.

قَالَ كَلَّا ۖ إِنَّ مَعِيَ رَبِّي سَيَهْدِينِ ﴿٦٢﴾

63. ನಾವು ಮೂಸಾರಿಗೆ 'ದಿವ್ಯವಾಣಿ' ಮೂಲಕ, "ನಿಮ್ಮ ಲಾಠಿಯನ್ನು ಸಮುದ್ರಕ್ಕೆ ಹೊಡೆಯಿರಿ" ಎಂದು ಅಪ್ಪಣೆ ಕೊಟ್ಟೆವು. ಹಠಾತ್ತನೆ ಸಮುದ್ರ ಸೀಳಾಯಿತು ಮತ್ತು ಅದರ ಪ್ರತಿಯೊಂದು ಭಾಗವು ಒಂದು ಮಹಾ ಪರ್ವತದಂತಾಗಿ ಬಿಟ್ಟಿತು.

فَأَوْحَيْنَا إِلَىٰ مُوسَىٰ أَنِ اضْرِبْ بِعَصَاكَ
الْبَحْرَ ۖ فَانْفَلَقَ فَكَانَ كُلُّ فِرْقٍ
كَالطَّوْدِ الْعَظِيمِ ﴿٦٣﴾

64. ನಾವು ಅಲ್ಲೇ ಇನ್ನೊಂದು ಸಮೂಹವನ್ನು ಸಮೀಪಕ್ಕೆ ತಂದೆವು.

وَأَزْلَفْنَا ثَمَّ الْآخَرِينَ ﴿٦٤﴾

65. ಮೂಸಾ ಮತ್ತು ಅವರ ಜೊತೆಗಿದ್ದವರೆಲ್ಲರನ್ನೂ ನಾವು ರಕ್ಷಿಸಿದೆವು.

وَأَنْجَيْنَا مُوسَىٰ وَمَنْ مَعَهُ أَجْمَعِينَ ﴿٦٥﴾

66. ಮತ್ತು ಇತರರನ್ನು ಮುಳುಗಿಸಿಬಿಟ್ಟೆವು.

ثُمَّ اَغۡرَقۡنَا الۡاٰخَرِيۡنَ ﴿٦٦﴾

67. ನಿಶ್ಚಯವಾಗಿಯೂ ಈ ಘಟನೆಯಲ್ಲೊಂದು ನಿದರ್ಶನವಿದೆ. ಆದರೆ ಇವರಲ್ಲಿ ಹೆಚ್ಚಿನವರು ನಂಬುವವರಲ್ಲ.

اِنَّ فِىۡ ذٰلِكَ لَاٰيَةً ؕ وَمَا كَانَ
اَكۡثَرُهُمۡ مُّؤۡمِنِيۡنَ ﴿٦٧﴾

68. ನಿಶ್ಚಯವಾಗಿಯೂ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

وَاِنَّ رَبَّكَ لَهُوَ الۡعَزِيۡزُ الرَّحِيۡمُ ﴿٦٨﴾ ٤ ع ١٧ ٨

69. ಇವರಿಗೆ ಇಬ್‌ರಾಹೀಮರ ವೃತ್ತಾಂತವನ್ನು ತಿಳಿಸಿರಿ.

وَاتۡلُ عَلَيۡهِمۡ نَبَاَ اِبۡرٰهِيۡمَ ‌ۘ‏ ﴿٦٩﴾ وقف لازم

70. ಅವರು ತಮ್ಮ ತಂದೆ ಮತ್ತು ಜನಾಂಗದೊಡನೆ, "ನೀವು ಇದೆಂತಹ ವಸ್ತುಗಳನ್ನು ಪೂಜಿಸುತ್ತಿರುವಿರಿ?" ಎಂದು ಕೇಳಿದಾಗ-

اِذۡ قَالَ لِاَبِيۡهِ وَقَوۡمِهٖ مَا تَعۡبُدُوۡنَ ﴿٧٠﴾

71. ಅವರು, "ಇವು ಕೆಲವು ವಿಗ್ರಹಗಳು, ನಾವು ಇವುಗಳನ್ನು ಪೂಜಿಸುತ್ತೇವೆ ಮತ್ತು ಇವುಗಳ ಸೇವೆಯಲ್ಲೇ ನಿರತರಾಗಿರುತ್ತೇವೆ" ಎಂದರು.

قَالُوۡا نَعۡبُدُ اَصۡنَامًا فَنَظَلُّ لَهَا عٰكِفِيۡنَ ﴿٧١﴾

72. ಆಗ ಇವರು ಕೇಳಿದರು, "ನೀವು ಇವುಗಳನ್ನು ಕರೆದು ಪ್ರಾರ್ಥಿಸಿದಾಗ ಇವು ಕೇಳುತ್ತವೆಯೇ?

قَالَ هَلۡ يَسۡمَعُوۡنَكُمۡ اِذۡ تَدۡعُوۡنَ ۙ‏ ﴿٧٢﴾

73. ಅಥವಾ ಇವು ನಿಮಗೇನಾದರೂ ಲಾಭವನ್ನಾಗಲಿ, ಹಾನಿಯನ್ನಾಗಲಿ ಉಂಟು ಮಾಡುತ್ತವೆಯೇ?"

اَوۡ يَنۡفَعُوۡنَكُمۡ اَوۡ يَضُرُّوۡنَ ﴿٧٣﴾

74. ಅದಕ್ಕೆ ಅವರು, "ಇಲ್ಲ, ಆದರೆ ನಮ್ಮ ಪೂರ್ವಿಕರು ಹೀಗೆಯೇ ಮಾಡುತ್ತಿರುವುದನ್ನು ನಾವು ಕಂಡಿದ್ದೇವೆ" ಎಂದರು.

قَالُوۡا بَلۡ وَجَدۡنَاۤ اٰبَآءَنَا كَذٰلِكَ
يَفۡعَلُوۡنَ ﴿٧٤﴾

75-76. ಆಗ ಇಬ್‌ರಾಹೀಮರು ಕೇಳಿದರು: "ನೀವು ಮತ್ತು ನಿಮ್ಮ ಪೂರ್ವಿಕರು ಪೂಜಿಸುತ್ತಾ ಬಂದಿರುವ ವಸ್ತುಗಳನ್ನು ನೀವೆಂದಾದರೂ (ಕಣ್ತೆರೆದು) ನೋಡಿದ್ದುಂಟೇ?

قَالَ اَفَرَءَيۡتُمۡ مَّا كُنۡتُمۡ تَعۡبُدُوۡنَ ۙ‏ ﴿٧٥﴾
اَنۡتُمۡ وَاٰبَآؤُكُمُ الۡاَقۡدَمُوۡنَ ۖ ﴿٧٦﴾

77. ಇವೆಲ್ಲವೂ ನನ್ನ ಶತ್ರುಗಳು. ಸರ್ವಲೋಕಗಳ ಪಾಲಕ ಪ್ರಭುವೊಬ್ಬನ ಹೊರತು-

فَاِنَّهُمۡ عَدُوٌّ لِّىۡۤ اِلَّا رَبَّ الۡعٰلَمِيۡنَ ۙ‏ ﴿٧٧﴾

78. ಅವನು ನನ್ನನ್ನು ಸೃಷ್ಟಿಸಿದನು ಮತ್ತು ಅವನೇ ನನಗೆ ಮಾರ್ಗದರ್ಶನ ನೀಡುತ್ತಾನೆ-

الَّذِىۡ خَلَقَنِىۡ فَهُوَ يَهۡدِيۡنِ ۙ‏ ﴿٧٨﴾

79. ಅವನು ನನಗೆ ಉಣಿಸುತ್ತಾನೆ ಮತ್ತು ಕುಡಿಸುತ್ತಾನೆ-	وَالَّذِي هُوَ يُطْعِمُنِي وَيَسْقِينِ
80. ನಾನು ಕಾಯಿಲೆ ಬಿದ್ದಾಗ ಅವನೇ ನನ್ನನ್ನು ಗುಣ ಪಡಿಸುತ್ತಾನೆ-	وَإِذَا مَرِضْتُ فَهُوَ يَشْفِينِ
81. ಅವನೇ ನನಗೆ ಮರಣ ಕೊಡುವವನು ಮತ್ತು ಪುನಃ ಜೀವಂತ ಗೊಳಿಸುವವನು-	وَالَّذِي يُمِيتُنِي ثُمَّ يُحْيِينِ
82. ಪ್ರತಿಫಲ ನೀಡಲಾಗುವ ಆ ದಿನ ಅವನು ನನ್ನ ತಪ್ಪುಗಳನ್ನು ಕ್ಷಮಿಸುವನೆಂದೂ ನಾನು ಅವನಿಂದ ನಿರೀಕ್ಷಿಸುತ್ತಿದ್ದೇನೆ" ಎಂದು ಹೇಳಿದರು.	وَالَّذِي أَطْمَعُ أَنْ يَغْفِرَ لِي خَطِيئَتِي يَوْمَ الدِّينِ
83. (ತರುವಾಯ ಇಬ್‌ರಾಹೀಮರು ಹೀಗೆ ಪ್ರಾರ್ಥಿಸಿದರು:) "ನನ್ನ ಪ್ರಭೂ, ನನಗೆ 'ನಿರ್ಧಾರ ಶಕ್ತಿ' ನೀಡು ಮತ್ತು ನನ್ನನ್ನು ಸಜ್ಜನರೊಂದಿಗೆ ಸೇರಿಸು.	رَبِّ هَبْ لِي حُكْمًا وَأَلْحِقْنِي بِالصَّالِحِينَ
84. ಮುಂದಿನ ಪೀಳಿಗೆಗಳಲ್ಲಿ ನನಗೆ ಸತ್ಕೀರ್ತಿಯನ್ನು ದಯಪಾಲಿಸು-	وَاجْعَلْ لِي لِسَانَ صِدْقٍ فِي الْآخِرِينَ
85. ಮತ್ತು ಸಂಪತ್‌ಭರಿತವಾದ ಸ್ವರ್ಗದ ಉತ್ತರಾಧಿಕಾರಿಗಳಲ್ಲಿ ನನ್ನನ್ನು ಸೇರಿಸು-	وَاجْعَلْنِي مِنْ وَرَثَةِ جَنَّةِ النَّعِيمِ
86. ನನ್ನ ತಂದೆಗೆ ಕ್ಷಮೆ ನೀಡು. ನಿಜಕ್ಕೂ ಅವರು ಪಥಭ್ರಷ್ಟರಲ್ಲಾಗಿದ್ದಾರೆ-	وَاغْفِرْ لِأَبِي إِنَّهُ كَانَ مِنَ الضَّالِّينَ
87. ಎಲ್ಲರೂ ಜೀವಂತಗೊಳಿಸಿ ಎಬ್ಬಿಸಲ್ಪಡುವ ಆ ದಿನ ನನ್ನನ್ನು ಅವಮಾನಿಸದಿರು-	وَلَا تُخْزِنِي يَوْمَ يُبْعَثُونَ
88 ಅಂದು ಸೊತ್ತಾಗಲಿ, ಸಂತತಿಗಳಾಗಲಿ ಸ್ವಲ್ಪವೂ ಫಲಕಾರಿಯಾಗಲಾರವು,	يَوْمَ لَا يَنْفَعُ مَالٌ وَلَا بَنُونَ
89. ನಿಷ್ಕಳಂಕ ಹೃದಯದೊಂದಿಗೆ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗುವವನ ಹೊರತು."	إِلَّا مَنْ أَتَى اللَّهَ بِقَلْبٍ سَلِيمٍ
90. (ಅಂದು)[10] ಸ್ವರ್ಗವನ್ನು ಧರ್ಮನಿಷ್ಠರ ಬಳಿಗೆ ತರಲಾಗುವುದು.	وَأُزْلِفَتِ الْجَنَّةُ لِلْمُتَّقِينَ

10. ಇಲ್ಲಿಂದ 102ನೆಯ ಸೂಕ್ತದ ತನಕವಿರುವ ಉಲ್ಲೇಖ ಹ. ಇಬ್‌ರಾಹೀಮ್‌ರ(ಅ) ಮಾತಲ್ಲ. ಅದು ಅಲ್ಲಾಹನು ಅದಕ್ಕೆ ಸೇರಿಸಿರುವ ಹೆಚ್ಚುವರಿ ವಿಷಯಗಳಾಗಿವೆ.

وَبُرِّزَتِ الْجَحِيمُ لِلْغَاوِينَ ﴿٩١﴾

91. ಮತ್ತು ನರಕವು ಪಥಭ್ರಷ್ಟರ ಮುಂದೆ ತೆರೆಯಲ್ಪಡುವುದು-

وَقِيلَ لَهُمْ أَيْنَمَا كُنتُمْ تَعْبُدُونَ ﴿٩٢﴾ مِن دُونِ اللَّهِ هَلْ يَنصُرُونَكُمْ أَوْ يَنتَصِرُونَ ﴿٩٣﴾

92-93. "ನೀವು ಅಲ್ಲಾಹನನ್ನು ಬಿಟ್ಟು ಪೂಜಿಸುತ್ತಿದ್ದವರೆಲ್ಲಾ ಈಗ ಎಲ್ಲಿದ್ದಾರೆ? ಅವರು ನಿಮಗೇನಾದರೂ ಸಹಾಯ ಮಾಡುತ್ತಿದ್ದಾರೆಯೇ? ಅಥವಾ ತಮ್ಮ ರಕ್ಷಣೆಯನ್ನಾದರೂ ಮಾಡಿಕೊಳ್ಳಬಲ್ಲರೇ?" ಎಂದು ಅವರೊಡನೆ ಕೇಳಲಾಗುವುದು.

فَكُبْكِبُوا فِيهَا هُمْ وَالْغَاوُونَ ﴿٩٤﴾ وَجُنُودُ إِبْلِيسَ أَجْمَعُونَ ﴿٩٥﴾

94-95. ತರುವಾಯ ಆ ಆರಾಧ್ಯರೂ ಪಥಭ್ರಷ್ಟ ಜನರೂ ಇಬ್‌ಲೀಸನ ಸೇನೆಯೂ ಎಲ್ಲರೂ ಅದರೊಳಗೆ ಒಂದರ ಮೇಲೊಂದರಂತೆ ತಳ್ಳಲ್ಪಡುವರು.

قَالُوا وَهُمْ فِيهَا يَخْتَصِمُونَ ﴿٩٦﴾

96. ಅಲ್ಲಿ ಇವರೆಲ್ಲರೂ ಪರಸ್ಪರ ಜಗಳಾಡುವರು ಮತ್ತು ಈ ಪಥ ಭ್ರಷ್ಟ ಜನರು (ತಮ್ಮ ಆರಾಧ್ಯರೊಡನೆ ಹೀಗೆ ಹೇಳುವರು)-

تَاللَّهِ إِن كُنَّا لَفِي ضَلَالٍ مُّبِينٍ ﴿٩٧﴾ إِذْ نُسَوِّيكُم بِرَبِّ الْعَالَمِينَ ﴿٩٨﴾

97-98. "ಅಲ್ಲಾಹನಾಣೆ! ನಾವು ನಿಮಗೆ ಸರ್ವಲೋಕಗಳ ಪಾಲಕ ಪ್ರಭುವಿಗೆ ಸಮಾನವಾದ ಸ್ಥಾನ ನೀಡುತ್ತಿರುವಾಗ ಪ್ರತ್ಯಕ್ಷ ಪಥ ಭ್ರಷ್ಟತೆಗೊಳಗಾಗಿದ್ದೆವು.

وَمَا أَضَلَّنَا إِلَّا الْمُجْرِمُونَ ﴿٩٩﴾

99. ನಮ್ಮನ್ನು ಈ ಪಥಭ್ರಷ್ಟತೆಗೆ ಗುರಿಪಡಿಸಿದವರು ಅಪರಾಧಿಗಳೇ ಆಗಿದ್ದರು.

فَمَا لَنَا مِن شَافِعِينَ ﴿١٠٠﴾

100. ಈಗ ನಮಗೆ ಯಾವ ಶಿಫಾರಸುದಾರನೂ ಇಲ್ಲ,

وَلَا صَدِيقٍ حَمِيمٍ ﴿١٠١﴾

101. ಆಪ್ತ ಸ್ನೇಹಿತನೂ ಇಲ್ಲ.

فَلَوْ أَنَّ لَنَا كَرَّةً فَنَكُونَ مِنَ الْمُؤْمِنِينَ ﴿١٠٢﴾

102. ಅಯ್ಯೋ! ನಮಗೆ ಭೂಲೋಕಕ್ಕೆ ಮರಳುವ ಒಂದವಕಾಶ ಸಿಕ್ಕಿಬಿಟ್ಟಿದ್ದರೆ ನಾವು ಸತ್ಯವಿಶ್ವಾಸಿಗಳಾಗುತ್ತಿದ್ದೆವು."

إِنَّ فِي ذَٰلِكَ لَآيَةً ۖ وَمَا كَانَ أَكْثَرُهُم مُّؤْمِنِينَ ﴿١٠٣﴾

103. ನಿಶ್ಚಯವಾಗಿಯೂ ಇದರಲ್ಲೊಂದು ದೊಡ್ಡ ನಿದರ್ಶನವಿದೆ.[11] ಆದರೆ ಇವರಲ್ಲಿ ಹೆಚ್ಚಿನವರು ವಿಶ್ವಾಸವಿಡುವವರಲ್ಲ.

وَإِنَّ رَبَّكَ لَهُوَ الْعَزِيزُ الرَّحِيمُ ﴿١٠٤﴾ ع

104. ನಿಜಕ್ಕೂ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

11. ಅರ್ಥಾತ್ ಹ. ಇಬ್‌ರಾಹೀಮ್‌ರ(ಅ) ಘಟನೆಯಲ್ಲಿ.

105. ನೂಹರ ಜನಾಂಗವು ಸಂದೇಶವಾಹಕರನ್ನು ಸುಳ್ಳಾಗಿಸಿತು.

كَذَّبَتْ قَوْمُ نُوحِ ٱلْمُرْسَلِينَ ۝١٠٥

106. ಅವರ ಸಹೋದರ ನೂಹರು, ಅವರೊಡನೆ ಹೇಳಿದ ಸಂದರ್ಭ ವನ್ನು ಸ್ಮರಿಸಿರಿ; "ನೀವು ಭಯ ಪಡುವುದಿಲ್ಲವೇ?

إِذْ قَالَ لَهُمْ أَخُوهُمْ نُوحٌ أَلَا تَتَّقُونَ ۝١٠٦

107. ನಾನು ನಿಮ್ಮ ಪಾಲಿಗೆ ಒಬ್ಬ ಪ್ರಾಮಾಣಿಕ ಸಂದೇಶವಾಹಕ ನಾಗಿದ್ದೇನೆ.

إِنِّي لَكُمْ رَسُولٌ أَمِينٌ ۝١٠٧

108. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

فَٱتَّقُوا ٱللَّهَ وَأَطِيعُونِ ۝١٠٨

109. ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವ ಪ್ರತಿಫಲವನ್ನೂ ಬಯಸುವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಿನ ಬಳಿ ಇದೆ.

وَمَا أَسْـَٔلُكُمْ عَلَيْهِ مِنْ أَجْرٍ إِنْ أَجْرِيَ إِلَّا عَلَىٰ رَبِّ ٱلْعَٰلَمِينَ ۝١٠٩

110. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು (ನಿಸ್ಸಂಕೋಚವಾಗಿ) ನನ್ನನ್ನು ಅನುಸರಿಸಿರಿ."

فَٱتَّقُوا ٱللَّهَ وَأَطِيعُونِ ۝١١٠

111. ಅದಕ್ಕೆ ಅವರು, "ನಾನು ನಿನ್ನನ್ನು ನಂಬಬೇಕೇ? ನಿನ್ನನ್ನು ಅನುಸರಿಸುವವರಂತೂ ಅತ್ಯಂತ ನೀಚರಾಗಿದ್ದಾರೆ" ಎಂದು ಉತ್ತರಿಸಿದರು.

قَالُوٓا أَنُؤْمِنُ لَكَ وَٱتَّبَعَكَ ٱلْأَرْذَلُونَ ۝١١١

112. ನೂಹರು ಹೇಳಿದರು, "ಅವರ ಕರ್ಮ ಹೇಗಿದೆಯೆಂದು ನನಗೇನು ಗೊತ್ತು?

قَالَ وَمَا عِلْمِي بِمَا كَانُوا يَعْمَلُونَ ۝١١٢

113. ಅವರ ವಿಚಾರಣೆಯ ಹೊಣೆ ನನ್ನ ಪ್ರಭುವಿನ ಮೇಲಿದೆ. ನೀವು ಒಂದಿಷ್ಟು ವಿವೇಕದಿಂದ ವರ್ತಿಸುತ್ತಿದ್ದರೆ!

إِنْ حِسَابُهُمْ إِلَّا عَلَىٰ رَبِّي لَوْ تَشْعُرُونَ ۝١١٣

114. ಸತ್ಯವಿಶ್ವಾಸ ಸ್ವೀಕರಿಸಿದವರನ್ನು ಧಿಕ್ಕರಿಸುವುದು ನನ್ನ ಕೆಲಸವಲ್ಲ.

وَمَآ أَنَا بِطَارِدِ ٱلْمُؤْمِنِينَ ۝١١٤

115. ನಾನೊಬ್ಬ ಸುಸ್ಪಷ್ಟ ಎಚ್ಚರಿಕೆ ಕೊಡುವವನು ಮಾತ್ರ."

إِنْ أَنَا إِلَّا نَذِيرٌ مُّبِينٌ ۝١١٥

116. ಆಗ ಅವರು, "ನೂಹ್, ನೀನು ಇದನ್ನು ತೊರೆಯದಿದ್ದರೆ ಖಂಡಿತವಾಗಿಯೂ ನೀನು ಕಲ್ಲೆಸೆದು ಕೊಲ್ಲಲ್ಪಡುವವರಲ್ಲಾ ಗುವೆ" ಎಂದರು.

قَالُوا لَئِن لَّمْ تَنتَهِ يَٰنُوحُ لَتَكُونَنَّ
مِنَ ٱلْمَرْجُومِينَ ۝١١٦

117. ನೂಹರು ಪ್ರಾರ್ಥಿಸಿದರು, "ನನ್ನ ಪ್ರಭೂ, ನನ್ನ ಜನಾಂಗವು ನನ್ನನ್ನು ಸುಳ್ಳಾಗಿಸಿ ಬಿಟ್ಟಿತು.

قَالَ رَبِّ إِنَّ قَوْمِي كَذَّبُونِ ﴿١١٧﴾

118. ಇನ್ನು ನನ್ನ ಮತ್ತು ಅವರ ನಡುವೆ ನಿರ್ಣಾಯಕ ತೀರ್ಮಾನ ಮಾಡಿಬಿಡು. ನನ್ನನ್ನೂ ನನ್ನೊಂದಿಗಿರುವ ಸತ್ಯವಿಶ್ವಾಸಿಗಳನ್ನೂ ರಕ್ಷಿಸು."

فَافْتَحْ بَيْنِي وَبَيْنَهُمْ فَتْحًا وَنَجِّنِي وَمَن مَّعِيَ مِنَ الْمُؤْمِنِينَ ﴿١١٨﴾

119. ಕೊನೆಗೆ ನಾವು ಅವರನ್ನೂ ಅವರ ಜೊತೆಗಾರರನ್ನೂ ಒಂದು ತುಂಬಿದ ನಾವೆಯಲ್ಲಿ ರಕ್ಷಿಸಿದೆವು.[12]

فَأَنجَيْنَاهُ وَمَن مَّعَهُ فِي الْفُلْكِ الْمَشْحُونِ ﴿١١٩﴾

120. ತರುವಾಯ ಉಳಿದವರನ್ನು ಮುಳುಗಿಸಿ ಬಿಟ್ಟೆವು.

ثُمَّ أَغْرَقْنَا بَعْدُ الْبَاقِينَ ﴿١٢٠﴾

121. ನಿಶ್ಚಯವಾಗಿಯೂ ಇದರಲ್ಲೊಂದು ನಿದರ್ಶನವಿದೆ. ಆದರೆ ಇವರಲ್ಲಿ ಹೆಚ್ಚಿನವರು ನಂಬುವವರಲ್ಲ.

إِنَّ فِي ذَٰلِكَ لَآيَةً ۖ وَمَا كَانَ أَكْثَرُهُم مُّؤْمِنِينَ ﴿١٢١﴾

122. ವಾಸ್ತವದಲ್ಲಿ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

وَإِنَّ رَبَّكَ لَهُوَ الْعَزِيزُ الرَّحِيمُ ﴿١٢٢﴾

123. ಆದ್ (ಜನಾಂಗವು) ರಸೂಲರನ್ನು ಸುಳ್ಳಾಗಿಸಿತು.

كَذَّبَتْ عَادٌ الْمُرْسَلِينَ ﴿١٢٣﴾

124. ಅವರ ಸಹೋದರ ಹೂದರು ಅವರೊಡನೆ ಹೇಳಿದ್ದ ಸಂದರ್ಭ ವನ್ನು ಸ್ಮರಿಸಿರಿ; "ನೀವೇನು ಭಯ ಪಡುವುದಿಲ್ಲವೇ?

إِذْ قَالَ لَهُمْ أَخُوهُمْ هُودٌ أَلَا تَتَّقُونَ ﴿١٢٤﴾

125. ನಾನು ನಿಮ್ಮ ಪಾಲಿಗೆ ಓರ್ವ ಪ್ರಾಮಾಣಿಕ ಸಂದೇಶವಾಹಕನಾಗಿ ರುತ್ತೇನೆ-

إِنِّي لَكُمْ رَسُولٌ أَمِينٌ ﴿١٢٥﴾

126. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

فَاتَّقُوا اللَّهَ وَأَطِيعُونِ ﴿١٢٦﴾

127. ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವ ಪ್ರತಿಫಲವನ್ನೂ ಬಯಸುವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಿನ ಬಳಿ ಇದೆ.

وَمَا أَسْأَلُكُمْ عَلَيْهِ مِنْ أَجْرٍ ۖ إِنْ أَجْرِيَ إِلَّا عَلَىٰ رَبِّ الْعَالَمِينَ ﴿١٢٧﴾

128 ಇದೇನು ನೀವು ಪ್ರತಿಯೊಂದು ಉನ್ನತ ಸ್ಥಳದಲ್ಲಿ ವೃಥಾ ಒಂದು ಸ್ಮಾರಕ ಕಟ್ಟಡವನ್ನು ಕಟ್ಟುತ್ತೀರಿ-

أَتَبْنُونَ بِكُلِّ رِيعٍ آيَةً تَعْبَثُونَ ﴿١٢٨﴾

12. "ತುಂಬಿದ ನಾವೆ" ಎಂದರೆ ನಾವೆಯು ವಿಶ್ವಾಸವಿಟ್ಟ ಮಾನವರು ಹಾಗೂ ನಮ್ಮೊಡನೆ ಇರಿಸಲು ಸೂಚಿಸಲಾಗಿದ್ದ ಒಂದೊಂದು ಜೊತೆ ಪ್ರಾಣಿಗಳಿಂದ ತುಂಬಿತ್ತು ಎಂದರ್ಥ. ಹೂದ್ ಅಧ್ಯಾಯದ 40ನೆಯ ಸೂಕ್ತದಲ್ಲಿ ಅದರ ಉಲ್ಲೇಖವಿದೆ.

129. ಮತ್ತು ನಿಮಗೆ ಸದಾ ಇಲ್ಲೇ ಉಳಿಯಲಿಕ್ಕಿದೆಯೋ ಎಂಬಂತೆ ದೊಡ್ಡ ದೊಡ್ಡ ಸೌಧಗಳನ್ನು ನಿರ್ಮಿಸುತ್ತೀರಿ.

وَتَتَّخِذُوْنَ مَصَانِعَ لَعَلَّكُمْ تَخْلُدُوْنَ ۚ ﴿١٢٩﴾

130. ಮತ್ತು ಯಾರ ಮೇಲಾದರೂ ಕೈ ಹಾಕುವಾಗ ಮದವೇರಿದವರಂತೆ ಕೈ ಹಾಕುತ್ತೀರಿ.

وَاِذَا بَطَشْتُمْ بَطَشْتُمْ جَبَّارِيْنَ ۚ ﴿١٣٠﴾

131. ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

فَاتَّقُوا اللّٰهَ وَاَطِيْعُوْنِ ۚ ﴿١٣١﴾

132. ನೀವು ತಿಳಿದಿರುವ ವಸ್ತುಗಳನ್ನೆಲ್ಲ ನಿಮಗೆ ಕೊಟ್ಟಿರುವಾತನನ್ನು ಭಯಪಡಿರಿ.

وَاتَّقُوا الَّذِيْٓ اَمَدَّكُمْ بِمَا تَعْلَمُوْنَ ۚ ﴿١٣٢﴾

133. ಅವನು ನಿಮಗೆ ಪ್ರಾಣಿಗಳನ್ನು ಕೊಟ್ಟನು, ಸಂತತಿ ಕೊಟ್ಟನು,

اَمَدَّكُمْ بِاَنْعَامٍ وَّبَنِيْنَ ۙ ﴿١٣٣﴾

134. ತೋಟಗಳನ್ನೂ ಚಿಲುಮೆಗಳನ್ನೂ ಕೊಟ್ಟನು.

وَجَنّٰتٍ وَّعُيُوْنٍ ۚ ﴿١٣٤﴾

135. ನನಗೆ ನಿಮ್ಮ ವಿಷಯದಲ್ಲಿ ಒಂದು ಮಹಾ ದಿನದ ಯಾತನೆಯ ಭಯವಿದೆ."

اِنِّيْٓ اَخَافُ عَلَيْكُمْ عَذَابَ يَوْمٍ عَظِيْمٍ ۗ ﴿١٣٥﴾

136. ಆಗ ಅವರು - "ನೀನು ಉಪದೇಶ ಮಾಡಿದರೂ ಮಾಡದಿದ್ದರೂ ನಮ್ಮ ಮಟ್ಟಿಗೆ ಎಲ್ಲಾ ಒಂದೇ-

قَالُوْا سَوَآءٌ عَلَيْنَآ اَوَعَظْتَ اَمْ لَمْ تَكُنْ مِّنَ الْوٰعِظِيْنَ ۙ ﴿١٣٦﴾

137. ಈ ವಿಷಯಗಳೆಲ್ಲಾ ಹಿಂದಿನಿಂದಲೂ ಹೀಗೆಯೇ ನಡೆಯುತ್ತ ಬಂದಿವೆ-

اِنْ هٰذَآ اِلَّا خُلُقُ الْاَوَّلِيْنَ ۙ ﴿١٣٧﴾

138. ನಾವು ಯಾತನೆಗೊಳಪಡುವವರಲ್ಲ".

وَمَا نَحْنُ بِمُعَذَّبِيْنَ ۚ ﴿١٣٨﴾

139. ಹೀಗೆ ಅವರು ಅವರನ್ನು, (ಹ. ಹೂದರನ್ನು) ಸುಳ್ಳಾಗಿಸಿದರು ಮತ್ತು ನಾವು ಅವರನ್ನು ನಾಶಗೊಳಿಸಿದೆವು. ನಿಶ್ಚಯವಾಗಿಯೂ ಇದರಲ್ಲೊಂದು ನಿದರ್ಶನವಿದೆ. ಆದರೆ, ಇವರಲ್ಲಿ ಹೆಚ್ಚಿನವರು ನಂಬುವುದಿಲ್ಲ.

فَكَذَّبُوْهُ فَاَهْلَكْنٰهُمْ ۗ اِنَّ فِيْ ذٰلِكَ لَاٰيَةً ۗ وَمَا كَانَ اَكْثَرُهُمْ مُّؤْمِنِيْنَ ﴿١٣٩﴾

140. ವಾಸ್ತವದಲ್ಲಿ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

وَاِنَّ رَبَّكَ لَهُوَ الْعَزِيْزُ الرَّحِيْمُ ﴿١٤٠﴾ ع

141. ಸಮೂದ್ (ಜನಾಂಗವು) ರಸೂಲರನ್ನು ಸುಳ್ಳಾಗಿಸಿತು.

كَذَّبَتْ ثَمُوْدُ الْمُرْسَلِيْنَ ۚ ﴿١٤١﴾

142. ಅವರ ಸಹೋದರ ಸಾಲಿಹರು ಅವರೊಡನೆ ಹೇಳಿದ ಸಂದರ್ಭ ವನ್ನು ಸ್ಮರಿಸಿರಿ; "ನೀವು ಭಯ ಪಡುವುದಿಲ್ಲವೇ?

إِذْ قَالَ لَهُمْ أَخُوهُمْ صٰلِحٌ أَلَا تَتَّقُونَ ﴿١٤٢﴾

143. ನಾನು ನಿಮ್ಮ ಪಾಲಿಗೆ ಒಬ್ಬ ಪ್ರಾಮಾಣಿಕ ಸಂದೇಶವಾಹಕ ನಾಗಿರುತ್ತೇನೆ-

إِنِّي لَكُمْ رَسُولٌ أَمِينٌ ﴿١٤٣﴾

144. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

فَاتَّقُوا اللّٰهَ وَأَطِيعُونِ ﴿١٤٤﴾

145. ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವುದೇ ಪ್ರತಿಫಲವನ್ನು ಅಪೇಕ್ಷಿಸುವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಾದ ಅಲ್ಲಾಹನ ಬಳಿ ಇದೆ.

وَمَا أَسْئَلُكُمْ عَلَيْهِ مِنْ أَجْرٍ ۚ إِنْ
أَجْرِيَ إِلَّا عَلٰى رَبِّ الْعٰلَمِينَ ﴿١٤٥﴾

146. ನೀವು ಇಲ್ಲಿರುವ ಸಕಲ ವಸ್ತುಗಳ ಮಧ್ಯೆ ಹೀಗೆಯೇ ನಿಶ್ಚಿಂತರಾಗಿ ಉಳಿದುಕೊಂಡಿರಲು ನಿಮ್ಮನ್ನು ಬಿಟ್ಟು ಬಿಡಲಾಗುವುದೇ?

أَتُتْرَكُونَ فِي مَا هٰهُنَا آمِنِينَ ﴿١٤٦﴾

147. ಈ ಉದ್ಯಾನಗಳಲ್ಲೂ ಕಾಲುವೆಗಳಲ್ಲೂ-

فِي جَنّٰتٍ وَعُيُونٍ ﴿١٤٧﴾

148. ಈ ಹೊಲಗಳಲ್ಲೂ ರಸಭರಿತ ಗೊಂಚಲುಗಳಿರುವ ಖರ್ಜೂರದ ತೋಟಗಳಲ್ಲೂ? (ಉಳಿದುಕೊಂಡಿರಲು ಬಿಡಲಾಗುವುದೇ?)

وَزُرُوعٍ وَنَخْلٍ طَلْعُهَا هَضِيمٌ ﴿١٤٨﴾

149. ನೀವು ಹೆಗ್ಗಳಿಕೆಗಾಗಿ ಪರ್ವತಗಳನ್ನು ಕೊರೆದು ಅವುಗಳೊಳಗೆ ಕಟ್ಟಡಗಳನ್ನು ನಿರ್ಮಿಸುತ್ತೀರಿ.

وَتَنْحِتُونَ مِنَ الْجِبَالِ بُيُوتًا فٰرِهِينَ ﴿١٤٩﴾

150. ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

فَاتَّقُوا اللّٰهَ وَأَطِيعُونِ ﴿١٥٠﴾

151. ಆ ಅತಿರೇಕಿಗಳನ್ನು ಅನುಸರಿಸಬೇಡಿರಿ.

وَلَا تُطِيعُوا أَمْرَ الْمُسْرِفِينَ ﴿١٥١﴾

152. ಅವರು ಭೂಮಿಯಲ್ಲಿ ಗೊಂದಲವನ್ನುಂಟು ಮಾಡುತ್ತಾರೆ. ಯಾವ ಸುಧಾರಣಾ ಕಾರ್ಯವನ್ನೂ ಮಾಡುವುದಿಲ್ಲ."

الَّذِينَ يُفْسِدُونَ فِي الْأَرْضِ وَلَا
يُصْلِحُونَ ﴿١٥٢﴾

153. ಆಗ ಅವರು ಹೇಳಿದರು, "ನೀನು ಕೇವಲ ಒಬ್ಬ ಮಾಟಬಾಧಿತ ವ್ಯಕ್ತಿ.

قَالُوا إِنَّمَا أَنْتَ مِنَ الْمُسَحَّرِينَ ﴿١٥٣﴾

154. ನೀನು ನಮ್ಮಂತೆಯೇ ಇರುವ ಒಬ್ಬ ಮನುಷ್ಯನಲ್ಲದೆ ಇನ್ನೇನು? ನೀನು ಸತ್ಯವಂತನಾಗಿದ್ದರೆ ಏನಾದರೊಂದು ನಿದರ್ಶನವನ್ನು ತಾ."

مَا أَنْتَ إِلَّا بَشَرٌ مِثْلُنَا ۖ فَأْتِ
بِآيَةٍ إِنْ كُنْتَ مِنَ الصّٰدِقِينَ ﴿١٥٤﴾

155. ಆಗ ಸಾಲಿಹ್‌ರು ಹೇಳಿದರು, "ಇದೊಂದು ಒಂಟೆ. ಒಂದು ದಿನ ನೀರು ಕುಡಿಯುವ ಹಕ್ಕು ಇದಕ್ಕೆ, ಇನ್ನೊಂದು ದಿನ ನೀರು ಪಡೆಯುವ ಹಕ್ಕು ನಿಮಗೆ.

قَالَ هٰذِهٖ نَاقَةٌ لَّهَا شِرْبٌ وَّلَكُمْ شِرْبُ يَوْمٍ مَّعْلُوْمٍ ﴿۱۵۵﴾

156. ಇದನ್ನು ಎಷ್ಟು ಮಾತ್ರಕ್ಕೂ ಕೆಣಕಬೇಡಿರಿ. ಅನ್ಯಥಾ ಒಂದು ಮಹಾ ದಿನದ ಯಾತನೆ ನಿಮ್ಮ ಮೇಲೆ ಎರಗುವುದು."

وَلَا تَمَسُّوْهَا بِسُوْٓءٍ فَيَاْخُذَكُمْ عَذَابُ يَوْمٍ عَظِيْمٍ ﴿۱۵۶﴾

157. ಆದರೆ ಅವರು ಅದರ ಮೊಣಕಾಲುಗಳನ್ನು ಕಡಿದು ಬಿಟ್ಟರು ಮತ್ತು ಕೊನೆಗೆ ಪಶ್ಚಾತ್ತಾಪ ಪಟ್ಟರು-

فَعَقَرُوْهَا فَاَصْبَحُوْا نٰدِمِيْنَ ﴿۱۵۷﴾

158. ಯಾತನೆಯು ಅವರ ಮೇಲೆ ಎರಗಿಯೇ ಬಿಟ್ಟಿತು. ನಿಶ್ಚಯವಾಗಿಯೂ ಇದರಲ್ಲೊಂದು ನಿದರ್ಶನವಿದೆ. ಆದರೆ ಇವರಲ್ಲಿ ಹೆಚ್ಚಿನವರು ನಂಬುವವರಲ್ಲ-

فَاَخَذَهُمُ الْعَذَابُ ؕ اِنَّ فِيْ ذٰلِكَ لَاٰيَةً ؕ وَمَا كَانَ اَكْثَرُهُمْ مُّؤْمِنِيْنَ ﴿۱۵۸﴾

159. ಮತ್ತು ವಾಸ್ತವದಲ್ಲಿ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

وَاِنَّ رَبَّكَ لَهُوَ الْعَزِيْزُ الرَّحِيْمُ ﴿۱۵۹﴾

160. ಲೂತರ ಜನಾಂಗವು ರಸೂಲರನ್ನು ಸುಳ್ಳಾಗಿಸಿತು.

كَذَّبَتْ قَوْمُ لُوْطِ الْمُرْسَلِيْنَ ﴿۱۶۰﴾

161. ಅವರ ಸಹೋದರ ಲೂತರು ಅವರೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ; "ನೀವು ಭಯಪಡುವುದಿಲ್ಲವೇ?

اِذْ قَالَ لَهُمْ اَخُوْهُمْ لُوْطٌ اَلَا تَتَّقُوْنَ ﴿۱۶۱﴾

162. ನಾನು ನಿಮ್ಮ ಪಾಲಿಗೆ ಓರ್ವ ಪ್ರಾಮಾಣಿಕ ಸಂದೇಶವಾಹಕನಾಗಿರುತ್ತೇನೆ-

اِنِّيْ لَكُمْ رَسُوْلٌ اَمِيْنٌ ﴿۱۶۲﴾

163. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

فَاتَّقُوا اللّٰهَ وَاَطِيْعُوْنِ ﴿۱۶۳﴾

164. ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸುವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಿನ ಬಳಿ ಇದೆ.

وَمَاۤ اَسْئَلُكُمْ عَلَيْهِ مِنْ اَجْرٍ ۚ اِنْ اَجْرِيَ اِلَّا عَلٰى رَبِّ الْعٰلَمِيْنَ ﴿۱۶۴﴾

165. ನೀವು ಜಗತ್ತಿನ ಸೃಷ್ಟಿಗಳ ಪೈಕಿ ಪುರುಷರ ಬಳಿಗೇ ಹೋಗುತ್ತೀರಾ?

اَتَاْتُوْنَ الذُّكْرَانَ مِنَ الْعٰلَمِيْنَ ﴿۱۶۵﴾

166. ಮತ್ತು ನಿಮ್ಮ ಪತ್ನಿಯರಲ್ಲಿ ನಿಮ್ಮ ಪ್ರಭು ನಿಮಗಾಗಿ

وَتَذَرُوْنَ مَا خَلَقَ لَكُمْ رَبُّكُمْ مِّنْ

ಸೃಷ್ಟಿಸಿರುವುದನ್ನು ಬಿಟ್ಟು ಬಿಡುತ್ತೀರಾ? ವಾಸ್ತವದಲ್ಲಿ ನೀವು ಹದಮೀರಿದ ಜನಾಂಗವಾಗಿದ್ದೀರಿ."	أَزْوَاجِكُمْ ۚ بَلْ أَنتُمْ قَوْمٌ عَادُونَ ﴿١٦٦﴾
167. ಆಗ ಅವರು, "ಲೂತ್, ನೀನು ಈ ಮಾತುಗಳನ್ನು ತೊರೆಯದಿದ್ದರೆ ನಮ್ಮ ನಾಡಿನಿಂದ ಹೊರಕ್ಕೆ ಅಟ್ಟಲ್ಪಟ್ಟವರ ಸಾಲಿಗೆ ನೀನೂ ಸೇರುವೆ" ಎಂದರು.	قَالُوا لَئِن لَّمْ تَنتَهِ يَا لُوطُ لَتَكُونَنَّ مِنَ الْمُخْرَجِينَ ﴿١٦٧﴾
168. ಆಗ ಅವರು ಹೇಳಿದರು, "ನಿಮ್ಮ ದುಷ್ಕೃತ್ಯಗಳಿಗಾಗಿ ಮರುಗುವವರಲ್ಲಿ ನಾನು ಸೇರಿದ್ದೇನೆ.	قَالَ إِنِّي لِعَمَلِكُم مِّنَ الْقَالِينَ ﴿١٦٨﴾
169. ಪ್ರಭೂ, ನನ್ನನ್ನೂ ನನ್ನ ಕುಟುಂಬವನ್ನೂ ಇವರು ಮಾಡುತ್ತಿರುವ ದುರಾಚಾರಗಳಿಂದ ರಕ್ಷಿಸು."[13]	رَبِّ نَجِّنِي وَأَهْلِي مِمَّا يَعْمَلُونَ ﴿١٦٩﴾
170. ಕೊನೆಗೆ ಹಿಂದೆ ಉಳಿದವರಲ್ಲಾಗಿದ್ದ ಓರ್ವ ವೃದ್ಧೆಯ ಹೊರತು-	فَنَجَّيْنَاهُ وَأَهْلَهُ أَجْمَعِينَ ﴿١٧٠﴾
171. ಅವರನ್ನೂ ಅವರ ಎಲ್ಲ ಕುಟುಂಬದವರನ್ನೂ ನಾವು ರಕ್ಷಿಸಿದೆವು.	إِلَّا عَجُوزًا فِي الْغَابِرِينَ ﴿١٧١﴾
172. ಅನಂತರ ಉಳಿದವರನ್ನೆಲ್ಲ ನಾಶಗೊಳಿಸಿ ಬಿಟ್ಟೆವು.	ثُمَّ دَمَّرْنَا الْآخَرِينَ ﴿١٧٢﴾
173. ಮತ್ತು ಅವರ ಮೇಲೆ ಒಂದು ಮಳೆಯನ್ನು ಸುರಿಸಿದೆವು. ಎಚ್ಚರಿಕೆ ಕೊಡಲ್ಪಟ್ಟಿದ್ದವರ ಮೇಲೆ ಇಳಿದಂತಹ ಅತ್ಯಂತ ಕೆಟ್ಟ ಮಳೆ.	وَأَمْطَرْنَا عَلَيْهِم مَّطَرًا ۖ فَسَاءَ مَطَرُ الْمُنذَرِينَ ﴿١٧٣﴾
174. ನಿಶ್ಚಯವಾಗಿಯೂ ಇದರಲ್ಲೊಂದು ನಿದರ್ಶನವಿದೆ. ಆದರೆ ಇವರಲ್ಲಿ ಹೆಚ್ಚಿನವರು ನಂಬುವವರಲ್ಲ.	إِنَّ فِي ذَٰلِكَ لَآيَةً ۖ وَمَا كَانَ أَكْثَرُهُم مُّؤْمِنِينَ ﴿١٧٤﴾
175. ಮತ್ತು ವಾಸ್ತವದಲ್ಲಿ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.	وَإِنَّ رَبَّكَ لَهُوَ الْعَزِيزُ الرَّحِيمُ ﴿١٧٥﴾
176. ಐಕಃದವರು[14] ರಸೂಲರನ್ನು ಸುಳ್ಳಾಗಿಸಿದರು.	كَذَّبَ أَصْحَابُ الْأَيْكَةِ الْمُرْسَلِينَ ﴿١٧٦﴾
177. ಶುಐಬರು ಅವರೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ; "ನೀವು ಭಯಪಡುವುದಿಲ್ಲವೇ?	إِذْ قَالَ لَهُمْ شُعَيْبٌ أَلَا تَتَّقُونَ ﴿١٧٧﴾

13. ಅರ್ಥಾತ್- ಹ. ಲೂತ್‌ರ(ಅ) ಪತ್ನಿ.
14. 'ಐಕಃದವರ' ಸಂಕ್ಷಿಪ್ತ ಉಲ್ಲೇಖ ಅಲ್ ಹಿಜ್ರ್ ಅಧ್ಯಾಯದ ಸೂಕ್ತ 78-84ರಲ್ಲಿ ಈ ಮೊದಲು ಬಂದಿದೆ.

178. ನಾನು ನಿಮ್ಮ ಪಾಲಿಗೆ ಓರ್ವ ಪ್ರಾಮಾಣಿಕ ಸಂದೇಶವಾಹಕ ನಾಗಿರುತ್ತೇನೆ-

إِنِّي لَكُمْ رَسُولٌ أَمِينٌ ﴿١٧٨﴾

179. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ.

فَاتَّقُوا اللَّهَ وَأَطِيعُونِ ﴿١٧٩﴾

180. ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸುವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಿನ ಬಳಿ ಇದೆ.

وَمَا أَسْأَلُكُمْ عَلَيْهِ مِنْ أَجْرٍ ۖ إِنْ
أَجْرِيَ إِلَّا عَلَىٰ رَبِّ الْعَالَمِينَ ﴿١٨٠﴾

181. ಅಳತೆ ಪಾತ್ರೆಯನ್ನು ಸರಿಯಾಗಿ ತುಂಬಿರಿ ಮತ್ತು ಯಾರಿಗೂ ಕಡಿಮೆ ಕೊಡಬೇಡಿರಿ.

أَوْفُوا الْكَيْلَ وَلَا تَكُونُوا مِنَ الْمُخْسِرِينَ ﴿١٨١﴾

182. ಸರಿಯಾದ ತಕ್ಕಡಿಯಲ್ಲಿ ತೂಗಿರಿ.

وَزِنُوا بِالْقِسْطَاسِ الْمُسْتَقِيمِ ﴿١٨٢﴾

183. ಜನರಿಗೆ ಅವರ ವಸ್ತುಗಳನ್ನು ಕಡಿತಗೊಳಿಸಿ ಕೊಡಬೇಡಿರಿ ಮತ್ತು ಭೂಮಿಯಲ್ಲಿ ಗೊಂದಲವನ್ನು ಹರಡುತ್ತಿರಬೇಡಿರಿ.

وَلَا تَبْخَسُوا النَّاسَ أَشْيَاءَهُمْ وَلَا
تَعْثَوْا فِي الْأَرْضِ مُفْسِدِينَ ﴿١٨٣﴾

184. ನಿಮ್ಮನ್ನೂ ಗತಪೀಳಿಗೆಗಳನ್ನೂ ಸೃಷ್ಟಿಸಿದಾತನನ್ನು ಭಯಪಡಿರಿ."

وَاتَّقُوا الَّذِي خَلَقَكُمْ وَالْجِبِلَّةَ الْأَوَّلِينَ ﴿١٨٤﴾

185. ಆಗ ಅವರು ಹೇಳಿದರು, "ನೀನೊಬ್ಬ ಮಾಟಬಾಧಿತನಾಗಿರುವೆ-

قَالُوا إِنَّمَا أَنْتَ مِنَ الْمُسَحَّرِينَ ﴿١٨٥﴾

186. ಮತ್ತು ನೀನು ನಮ್ಮ ಹಾಗೆಯೇ ಇರುವ ಓರ್ವ ಮಾನವನಲ್ಲದೆ ಬೇರೇನೂ ಅಲ್ಲ. ನಾವಂತು ನಿನ್ನನ್ನು ಬರಿಯ ಸುಳ್ಳುಗಾರನೆಂದು ಭಾವಿಸುತ್ತೇವೆ.

وَمَا أَنْتَ إِلَّا بَشَرٌ مِثْلُنَا وَإِنْ
نَظُنُّكَ لَمِنَ الْكَاذِبِينَ ﴿١٨٦﴾

187. ನೀನು ಸತ್ಯವಾದಿಯಾಗಿದ್ದರೆ ನಮ್ಮ ಮೇಲೆ ಆಕಾಶದ ಒಂದು ತುಂಡನ್ನು ಬೀಳಿಸಿ ಬಿಡು."

فَأَسْقِطْ عَلَيْنَا كِسَفًا مِنَ السَّمَاءِ إِنْ
كُنْتَ مِنَ الصَّادِقِينَ ﴿١٨٧﴾

188. ಆಗ ಶುಐಬರು, "ನೀವು ಮಾಡುತ್ತಿರುವುದನ್ನೆಲ್ಲ ನನ್ನ ಪ್ರಭು ತಿಳಿದಿರುವವನು" ಎಂದರು.

قَالَ رَبِّي أَعْلَمُ بِمَا تَعْمَلُونَ ﴿١٨٨﴾

189. ಅವರು, ಅವರನ್ನು (ಶುಐಬರನ್ನು) ಸುಳ್ಳಾಗಿಸಿ ಬಿಟ್ಟರು. ಕೊನೆಗೆ ಛತ್ರಿಯ ದಿನದ ಯಾತನೆ ಅವರ ಮೇಲೆ ಎರಗಿ ಬಿಟ್ಟಿತು.[15] ಅದೊಂದು ಅತಿ ಭಯಾನಕ ದಿನದ ಯಾತನೆಯಾಗಿತ್ತು.

فَكَذَّبُوهُ فَأَخَذَهُمْ عَذَابُ يَوْمِ الظُّلَّةِ ۚ
إِنَّهُ كَانَ عَذَابَ يَوْمٍ عَظِيمٍ ﴿١٨٩﴾

15. ಈ ಪದಗಳಿಂದ ಸ್ಪಷ್ಟವಾಗುವುದೇನೆಂದರೆ ಅವರು ದೇವ ಯಾತನೆಯನ್ನು ಬಯಸಿದ್ದರು. ಆದ್ದರಿಂದ ಅಲ್ಲಾಹನು ಅವರ ಕಡೆಗೆ

190. ನಿಶ್ಚಯವಾಗಿಯೂ ಇದರಲ್ಲೊಂದು ನಿದರ್ಶನವಿದೆ. ಆದರೆ ಇವರಲ್ಲಿ ಹೆಚ್ಚಿನವರು ನಂಬುವವರಲ್ಲ.

إِنَّ فِي ذَٰلِكَ لَآيَةً ۖ وَمَا كَانَ أَكْثَرُهُم مُّؤْمِنِينَ ١٩٠

191. ಮತ್ತು ವಾಸ್ತವದಲ್ಲಿ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.

وَإِنَّ رَبَّكَ لَهُوَ الْعَزِيزُ الرَّحِيمُ ١٩١

192. ಇದು ಸರ್ವಲೋಕಗಳ ಪಾಲಕ ಪ್ರಭುವಿನಿಂದ ಅವತೀರ್ಣಗೊಂಡಿದೆ.[16]

وَإِنَّهُ لَتَنزِيلُ رَبِّ الْعَالَمِينَ ١٩٢

193-194. ನೀವು (ದೇವವತಿಯಿಂದ ದೇವ ಸೃಷ್ಟಿಗಳಿಗೆ) ಎಚ್ಚರಿಕೆ ನೀಡುವವರಲ್ಲಿ ಸೇರಲಿಕ್ಕಾಗಿ, ಪ್ರಾಮಾಣಿಕ ಆತ್ಮವು[17] ಇದರ ಜೊತೆ ನಿಮ್ಮ ಹೃದಯಕ್ಕೆ ಇಳಿದಿದೆ,

نَزَلَ بِهِ الرُّوحُ الْأَمِينُ ١٩٣
عَلَىٰ قَلْبِكَ لِتَكُونَ مِنَ الْمُنذِرِينَ ١٩٤

195. ಇದು ಸುಸ್ಪಷ್ಟ ಅರಬೀ ಭಾಷೆಯಲ್ಲಿದೆ.

بِلِسَانٍ عَرَبِيٍّ مُّبِينٍ ١٩٥

196. ಮತ್ತು ಗತ ಜನಾಂಗಗಳ ಗ್ರಂಥಗಳಲ್ಲೂ ಇದು ಇದೆ.[18]

وَإِنَّهُ لَفِي زُبُرِ الْأَوَّلِينَ ١٩٦

197. ಇದನ್ನು ಬನೀಇಸ್ರಾಈಲರ ವಿದ್ವಾಂಸರು ತಿಳಿದಿರುವುದು ಇವರಿಗೆ (ಮಕ್ಕಾ ವಾಸಿಗಳಿಗೆ) ಒಂದು ನಿದರ್ಶನವಲ್ಲವೇ?[19]

أَوَلَمْ يَكُن لَّهُمْ آيَةً أَن يَعْلَمَهُ عُلَمَاءُ بَنِي إِسْرَائِيلَ ١٩٧

198. (ಆದರೆ ಇವರ ಹಟಮಾರಿತನವು ಯಾವ ಮಟ್ಟಕ್ಕೇರಿದೆಯೆಂದರೆ) ನಾವು ಇದನ್ನು ಓರ್ವ ಅರಬೇತರನ ಮೇಲೆ ಅವತೀರ್ಣಗೊಳಿಸಿ ಬಿಡುತ್ತಿದ್ದರೆ,

وَلَوْ نَزَّلْنَاهُ عَلَىٰ بَعْضِ الْأَعْجَمِينَ ١٩٨

199. ಹಾಗೂ ಅವನು ಇದನ್ನು (ಶುದ್ಧ ಅರಬೀ ಭಾಷೆಯ ಈ ವಾಣಿಯನ್ನು) ಓದಿ ಹೇಳುತ್ತಿದ್ದರೆ ಆಗಲೂ ಇವರು ನಂಬುತ್ತಿರಲಿಲ್ಲ.[20]

فَقَرَأَهُ عَلَيْهِم مَّا كَانُوا بِهِ مُؤْمِنِينَ ١٩٩

ಮೋಡವೊಂದನ್ನು ಕಳುಹಿಸಿದನು. ಯಾತನೆಯ ವರ್ಷವು ಅವರನ್ನು ಸಂಪೂರ್ಣ ನಾಶಪಡಿಸಿ ಬಿಡುವವರೆಗೂ ಪ್ರಸ್ತುತ ಮೋಡವು ಕೊಡೆಯಂತೆ ಅವರ ಮೇಲೆ ಆಚ್ಛಾದಿಸಿಕೊಂಡಿತ್ತು. ಹ. ಶುಐಬ್(ಅ) ಮದಿಯನ್ ಜನಾಂಗದ ಜತೆಗೆ ಐಕಃದವರ ಕಡೆಗೂ ಕಳುಹಿಸಲ್ಪಟ್ಟಿದ್ದರು ಎಂಬುದು ಇಲ್ಲಿ ಗಮನಾರ್ಹ. ಎರಡೂ ಜನಾಂಗಗಳ ಮೇಲೆ ವಿಭಿನ್ನ ರೀತಿಯ ಯಾತನೆ ಎರಗಿತು.

16. ಅರ್ಥಾತ್- ಯಾವುದರ ಸೂಕ್ತಗಳನ್ನು ನಿಮಗೆ ಓದಿ ಕೇಳಿಸಲಾಗುತ್ತಿದೆಯೋ ಆ ಕುರ್‌ಆನ್.

17. ಅರ್ಥಾತ್- ಜಿಬ್ರೀಲ್(ಅ).

18. ಅರ್ಥಾತ್- ಇದೇ ಪ್ರಸ್ತಾಪ, ದಿವ್ಯ ಸಂದೇಶ ಮತ್ತು ದೈವಿಕ ಬೋಧನೆಗಳು ಪೂರ್ವದ ದೈವಿಕ ಗ್ರಂಥಗಳಲ್ಲೂ ಇವೆ.

19. ಅರ್ಥಾತ್- ಕುರ್‌ಆನಿನಲ್ಲಿ ನೀಡಲಾಗಿರುವಂತಹ ಬೋಧನೆಗಳು ಸಾಕ್ಷಾತ್ ಪೂರ್ವ ಗ್ರಂಥಗಳಲ್ಲಿ ನೀಡಲಾಗಿರುವ ಬೋಧನೆಗಳೇ ಆಗಿವೆ ಎಂಬುದನ್ನು ಬನೀಇಸ್ರಾಈಲ್‌ನ ವಿದ್ವಾಂಸರೂ ಬಲ್ಲರು. ಪೂರ್ವಗ್ರಂಥಗಳ ಬೋಧನೆಗಳು ಅದಕ್ಕಿಂತ ಭಿನ್ನವಾಗಿದ್ದುವು ಎಂದು ಅವರು ಹೇಳುವಂತಿಲ್ಲ.

20. ಅರ್ಥಾತ್- ಸತ್ಯದ ವಾಹಕರ ಹೃದಯಗಳಂತೆ ಮನಸ್ಸಿನ ಸಂತೃಪ್ತಿ ಮತ್ತು ಹೃದಯದ ಗುಣೌಷಧವಾಗಿ ಅವರ ಹೃದಯದಲ್ಲಿ

200. ಹಾಗೆಯೇ ನಾವು ಇದನ್ನು (ಈ ಬೋಧನೆಯನ್ನು) ಅಪರಾಧಿಗಳ ಹೃದಯಗಳಿಂದ ಹಾಯಿಸಿದ್ದೇವೆ.

كَذٰلِكَ سَلَكْنٰهُ فِيْ قُلُوْبِ الْمُجْرِمِيْنَ ﴿٢٠٠﴾

201. ವೇದನಾತ್ಮಕ ಯಾತನೆಯನ್ನು ಕಂಡುಕೊಳ್ಳುವ ವರೆಗೂ ಅವರು ಇದರಲ್ಲಿ ವಿಶ್ವಾಸವಿರಿಸಲಾರರು.

لَا يُؤْمِنُوْنَ بِهٖ حَتّٰى يَرَوُا الْعَذَابَ الْاَلِيْمَ ﴿٢٠١﴾

202. ಅದು ಅವರಿಗೆ ಅರಿವಿಲ್ಲದಂತೆ ಅವರ ಮೇಲೆ ಬಂದೆರಗುವಾಗ-

فَيَاْتِيَهُمْ بَغْتَةً وَّهُمْ لَا يَشْعُرُوْنَ ﴿٢٠٢﴾

203. ಅವರು, "ನಮಗೀಗ ಏನಾದರೂ ಕಾಲಾವಕಾಶ ಸಿಗಬಹುದೇ?" ಎಂದು ಕೇಳುವರು.

فَيَقُوْلُوْا هَلْ نَحْنُ مُنْظَرُوْنَ ﴿٢٠٣﴾

204. ಹಾಗಾದರೆ ಇವರು ನಮ್ಮ ಯಾತನೆಗಾಗಿ ತವಕ ಪಡುತ್ತಿರುವರೇ?

اَفَبِعَذَابِنَا يَسْتَعْجِلُوْنَ ﴿٢٠٤﴾

205. ಇವರಿಗೆ ನಾವು ವರ್ಷಗಟ್ಟಲೆ ಸುಖಭೋಗಗಳಲ್ಲಿರಲು ಕಾಲಾವಕಾಶ ಕೊಟ್ಟರೂ-

اَفَرَءَيْتَ اِنْ مَّتَّعْنٰهُمْ سِنِيْنَ ﴿٢٠٥﴾

206. ಅನಂತರ ಇವರಿಗೆ ಎಚ್ಚರಿಕೆ ಕೊಡಲಾಗುತ್ತಿರುವ ವಸ್ತುವೇ ಇವರ ಮೇಲೆ ಬಂದೆರಗಿ ಬಿಟ್ಟರೆ-

ثُمَّ جَآءَهُمْ مَّا كَانُوْا يُوْعَدُوْنَ ﴿٢٠٦﴾

207. ಇವರಿಗೆ ಒದಗಿರುವ ಜೀವನ ಸಾಧನಗಳೆಲ್ಲ ಯಾವ ಪ್ರಯೋಜನಕ್ಕೆ ಬರುವವೆಂದು ನೀವು ವಿವೇಚಿಸಿದಿರಾ?

مَآ اَغْنٰى عَنْهُمْ مَّا كَانُوْا يُمَتَّعُوْنَ ﴿٢٠٧﴾

208-209. (ನೋಡಿರಿ) ನಾವು ಎಂದೂ ಯಾವ ನಾಡನ್ನೂ ಅದಕ್ಕೆ ಎಚ್ಚರಿಕೆ ಕೊಡುವ ಉದ್ಬೋಧಕರಿಲ್ಲದೆ ನಾಶಗೊಳಿಸಲಿಲ್ಲ ಮತ್ತು ನಾವು ಅಕ್ರಮಿಗಳಾಗಿರಲಿಲ್ಲ.

وَمَآ اَهْلَكْنَا مِنْ قَرْيَةٍ اِلَّا لَهَا مُنْذِرُوْنَ ﴿٢٠٨﴾
ذِكْرٰى وَمَا كُنَّا ظٰلِمِيْنَ ﴿٢٠٩﴾

210. ಇದನ್ನು (ಈ ಸುಸ್ಪಷ್ಟ ಗ್ರಂಥವನ್ನು) ಶೈತಾನರು ತಂದಿಳಿಸಲಿಲ್ಲ.

وَمَا تَنَزَّلَتْ بِهِ الشَّيٰطِيْنُ ﴿٢١٠﴾

211. ಈ ಕಾರ್ಯ ಅವರಿಗೆ ಶೋಭಿಸುವುದೂ ಇಲ್ಲ ಮತ್ತು ಅವರಿಗೆ ಇದರ ಸಾಮರ್ಥ್ಯವೂ ಇಲ್ಲ.

وَمَا يَنْۢبَغِيْ لَهُمْ وَمَا يَسْتَطِيْعُوْنَ ﴿٢١١﴾

212. ಅವರಂತು ಇದನ್ನು ಆಲಿಸುವುದರಿಂದಲೂ ದೂರವಿರಿಸಲ್ಪಟ್ಟಿರುತ್ತಾರೆ.[21]

اِنَّهُمْ عَنِ السَّمْعِ لَمَعْزُوْلُوْنَ ﴿٢١٢﴾

ಇಳಿಯುವುದಿಲ್ಲ. ಅವರು ಬೇಗೆಯಿಂದ ಬೆಂದು ಹೋಗುವಂತೆ ಕಾದ ಕಬ್ಬಿಣದ ಸಲಾಕೆಯ ರೂಪದಲ್ಲಿ ಅದು ಅವರ ಹೃದಯದಿಂದ ಹಾದು ಹೋಗುತ್ತದೆ. ಅವರು ಅದರ ವಿಷಯಗಳ ಬಗ್ಗೆ ಪರ್ಯಾಲೋಚನೆ ನಡೆಸುವ ಬದಲು ಅದರ ನಿರಾಕರಣೆಗಾಗಿ ಅಸ್ತ್ರಗಳನ್ನು ಹುಡುಕತೊಡಗುತ್ತಾರೆ.

21. ಅರ್ಥಾತ್- ಈ ಪವಿತ್ರ ಕುರ್‌ಆನ್ ಪ್ರವಾದಿವರ್ಯರ(ಸ) ಮೇಲೆ ಅವತೀರ್ಣಗೊಳ್ಳುತ್ತಿದ್ದಾಗ ಶೈತಾನರು ಅದನ್ನು ಆಲಿಸುವಂತೆಯೂ

213. ಆದುದರಿಂದ ಸಂದೇಶವಾಹಕರೇ, ಅಲ್ಲಾಹನೊಂದಿಗೆ ಇತರ ಯಾವ ಆರಾಧ್ಯನನ್ನೂ ಪ್ರಾರ್ಥಿಸಬೇಡಿರಿ. ಅನ್ಯಥಾ ನೀವು ಶಿಕ್ಷೆ ಹೊಂದುವವರಲ್ಲಾಗುವಿರಿ.

فَلَا تَدْعُ مَعَ اللّٰهِ اِلٰهًا اٰخَرَ فَتَكُوْنَ مِنَ الْمُعَذَّبِيْنَ ۚ۝٢١٣

214. ನಿಮ್ಮ ಅತ್ಯಂತ ನಿಕಟ ಸಂಬಂಧಿಕರಿಗೆ ಎಚ್ಚರಿಕೆ ನೀಡಿರಿ.

وَاَنْذِرْ عَشِيْرَتَكَ الْاَقْرَبِيْنَ ۙ۝٢١٤

215. ಸತ್ಯವಿಶ್ವಾಸಿಗಳ ಪೈಕಿ ನಿಮ್ಮನ್ನು ಅನುಸರಿಸುವವರೊಂದಿಗೆ ಸೌಜನ್ಯದಿಂದ ವರ್ತಿಸಿರಿ.

وَاخْفِضْ جَنَاحَكَ لِمَنِ اتَّبَعَكَ مِنَ الْمُؤْمِنِيْنَ ۚ۝٢١٥

216. ಆದರೆ ಅವರು ನಿಮ್ಮ ಆಜ್ಞೋಲ್ಲಂಘನೆ ಮಾಡಿದರೆ, ನೀವು ಮಾಡುವ ಕಾರ್ಯಗಳಿಂದ ನಾನು ಹೊಣೆಮುಕ್ತನಾಗಿದ್ದೇನೆಂದು ಹೇಳಿ ಬಿಡಿರಿ.

فَاِنْ عَصَوْكَ فَقُلْ اِنِّيْ بَرِيْٓءٌ مِّمَّا تَعْمَلُوْنَ ۚ۝٢١٦

217. ಮತ್ತು ಆ ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುವವನ ಮೇಲೆ ಭರವಸೆಯನ್ನಿಡಿರಿ-

وَتَوَكَّلْ عَلَى الْعَزِيْزِ الرَّحِيْمِ ۙ۝٢١٧

218. ನೀವು ಏಳುವಾಗ ಅವನು ನಿಮ್ಮನ್ನು ನೋಡುತ್ತಿರುತ್ತಾನೆ[22]-

الَّذِيْ يَرٰىكَ حِيْنَ تَقُوْمُ ۙ۝٢١٨

219. ಮತ್ತು ಸಾಷ್ಟಾಂಗವೆರಗುವವರ ಮಧ್ಯೆ ನಿಮ್ಮ ಚಲನವಲನಗಳ ಮೇಲೆ ಕಣ್ಣಿಟ್ಟಿರುತ್ತಾನೆ.

وَتَقَلُّبَكَ فِي السّٰجِدِيْنَ ۝٢١٩

220. ನಿಶ್ಚಯವಾಗಿಯೂ ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

اِنَّهٗ هُوَ السَّمِيْعُ الْعَلِيْمُ ۝٢٢٠

221. ಜನರೇ, ಶೈತಾನರು ಯಾರ ಮೇಲೆ ಇಳಿಯುತ್ತಾರೆಂದು ನಾನು ನಿಮಗೆ ಹೇಳಲೇ?

هَلْ اُنَبِّئُكُمْ عَلٰى مَنْ تَنَزَّلُ الشَّيٰطِيْنُ ۗ۝٢٢١

222. ಅವರು ಪ್ರತಿಯೊಬ್ಬ ಸುಳ್ಳುಗಾರ ಪಾಪಿಯ ಮೇಲೆ ಇಳಿಯುತ್ತಾರೆ-

تَنَزَّلُ عَلٰى كُلِّ اَفَّاكٍ اَثِيْمٍ ۙ۝٢٢٢

223. ವದಂತಿಗಳನ್ನು ಕಿವಿಗೆ ತುಂಬುತ್ತಾರೆ ಮತ್ತು ಅವರಲ್ಲಿ ಹೆಚ್ಚಿನವರು ಸುಳ್ಳುಗಾರರಾಗಿರುತ್ತಾರೆ.[23]

يُّلْقُوْنَ السَّمْعَ وَاَكْثَرُهُمْ كٰذِبُوْنَ ۗ۝٢٢٣

ಇರಲಿಲ್ಲ. ಆದ್ದರಿಂದ ಅವರ ಮೇಲೆ ಏನು ಅವತೀರ್ಣಗೊಳ್ಳುತ್ತದೆ ಎಂದು ತಿಳಿಯುವ ಪ್ರಶ್ನೆ ದೂರವೇ ಉಳಿಯಿತು.

22. ಏಳುವುದೆಂದರೆ ರಾತ್ರಿ ನಮಾಝ್‌ಗಾಗಿ ಏಳುವುದೂ ಆಗಿರಬಹುದು. ಹಾಗೆಯೇ ಪ್ರವಾದಿತ್ವದ ಹೊಣೆಗಾರಿಕೆಗಳನ್ನು ಈಡೇರಿಸುವುದಕ್ಕಾಗಿ ಏಳುವುದೂ ಆಗಿರಬಹುದು.

23. ಪ್ರವಾದಿವರ್ಯರನ್ನು(ಸ) ಮಾಟಗಾರ ಎಂದು ಕರೆಯುತ್ತಿದ್ದವರ ಆಕ್ಷೇಪಕ್ಕೆ ಈ ಮೂಲಕ ಉತ್ತರಿಸಲಾಗಿದೆ.

224. ಇನ್ನು ಕವಿಗಳು[24]- ಅವರ ಹಿಂದೆ ದಾರಿಗೆಟ್ಟವರು ನಡೆಯುತ್ತಿರುತ್ತಾರೆ.

وَالشُّعَرَآءُ يَتَّبِعُهُمُ الْغَاوٗنَ ﴿٢٢٤﴾

225. ಅವರು ಪ್ರತಿಯೊಂದು ಕಣಿವೆಯಲ್ಲಿ ಅಲೆದಾಡುವುದನ್ನು ನೀವು ಕಾಣುತ್ತಿಲ್ಲವೇ?

اَلَمْ تَرَ اَنَّهُمْ فِيْ كُلِّ وَادٍ يَّهِيْمُوْنَ ﴿٢٢٥﴾

226. ಮತ್ತು ಅವರು ತಾವು ಮಾಡದಿದ್ದುದನ್ನು ಆಡುತ್ತಾರೆ-

وَاَنَّهُمْ يَقُوْلُوْنَ مَا لَا يَفْعَلُوْنَ ﴿٢٢٦﴾

227. ಸತ್ಯವಿಶ್ವಾಸವನ್ನು ಸ್ವೀಕರಿಸಿ, ಸತ್ಕರ್ಮಗಳನ್ನು ಮಾಡುತ್ತ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುತ್ತ, ತಮ್ಮ ಮೇಲೆ ಅಕ್ರಮವಾದಾಗ ಮಾತ್ರ ಅಷ್ಟೇ ಪ್ರತೀಕಾರ ತೀರಿಸುವವರು ಇದಕ್ಕೆ ಹೊರತಾಗಿದ್ದಾರೆ.[25] ಅಕ್ರಮವೆಸಗುವವರಿಗೆ ಅವರು ಯಾವ ಪರಿಣಾಮಕ್ಕೊಳಗಾಗಲಿದ್ದಾರೆಂದು ಸದ್ಯದಲ್ಲೇ ತಿಳಿದು ಬರುವುದು.[26]

اِلَّا الَّذِيْنَ اٰمَنُوْا وَعَمِلُوا الصّٰلِحٰتِ وَذَكَرُوا اللّٰهَ كَثِيْرًا وَّانْتَصَرُوْا مِنْۢ بَعْدِ مَا ظُلِمُوْا ؕ وَسَيَعْلَمُ الَّذِيْنَ ظَلَمُوْۤا اَيَّ مُنْقَلَبٍ يَّنْقَلِبُوْنَ ﴿٢٢٧﴾

---

24. ಇದು ಪ್ರವಾದಿವರ್ಯರನ್ನು(ಸ) 'ಕವಿ' ಎಂದು ಆಕ್ಷೇಪಿಸುತ್ತಿದ್ದವರಿಗೆ ನೀಡಲಾದ ಉತ್ತರವಾಗಿದೆ.

25. ಇಲ್ಲಿ ಕವಿಗಳ ಕುರಿತು ಮಾಡಲಾದ ಸಾರ್ವತ್ರಿಕ ಖಂಡನೆಯ ನಂತರ ನಾಲ್ಕು ವಿಶೇಷತೆಗಳನ್ನು ಹೊಂದಿರುವ ಕವಿಗಳನ್ನು ಅದರಿಂದ ಹೊರತುಪಡಿಸಲಾಗಿದೆ. ಮೊದಲನೆಯದಾಗಿ ಅವರು ಸತ್ಯವಿಶ್ವಾಸಿಯಾಗಿರಬೇಕು, ಎರಡನೆಯದಾಗಿ ತಮ್ಮ ವ್ಯಾವಹಾರಿಕ ಜೀವನದಲ್ಲಿ ಸಚ್ಚರಿತರಾಗಿರಬೇಕು, ಮೂರನೆಯದಾಗಿ ಅಲ್ಲಾಹನನ್ನು ಯಥೇಚ್ಛ ಸ್ಮರಿಸುವವರಾಗಿರಬೇಕು, ನಾಲ್ಕನೆಯದಾಗಿ ವೈಯಕ್ತಿಕ ಲಾಭಕ್ಕಾಗಿ ಅವರು ಯಾರನ್ನೂ ನಿಂದಿಸುವವರಾಗಿರಬಾರದು. ಮಾತ್ರವಲ್ಲ ಅಕ್ರಮಿಗಳ ವಿರುದ್ಧ ಸತ್ಯದ ಪರ ವಹಿಸುವ ಅವಶ್ಯಕತೆ ಇದ್ದರೆ ವೀರ ಕಲಿಗಳು ಬಿಲ್ಲು ಮತ್ತು ಖಡ್ಗವನ್ನು ಉಪಯೋಗಿಸುವಂತೆ ತಮ್ಮ ನಾಲಗೆಯನ್ನು ಉಪಯೋಗಿಸುವವರಾಗಿರಬೇಕು.

26. ಅಕ್ರಮವೆಸಗುವವರೆಂದರೆ ಇಲ್ಲಿ ಸತ್ಯದ ಪರಾಜಯಕ್ಕಾಗಿ ಹಟಸಾಧನೆಯ ಮಾರ್ಗ ಅನುಸರಿಸುವವರು ಮತ್ತು ಪ್ರವಾದಿವರ್ಯರ(ಸ) ಮೇಲೆ ಕವಿ, ಜಾದೂಗಾರ, ಮಾಟಗಾರ, ಹುಚ್ಚ ಮುಂತಾದ ಆರೋಪ ಹೊರಿಸುವ ಮೂಲಕ ಅಜ್ಞಾನದಲ್ಲಿರುವವರು ಅವರ ಸಂದೇಶದ ಬಗ್ಗೆ ಶಂಕೆ ತಾಳಿ ಅವರ ಬೋಧನೆಗಳಿಂದ ದೂರ ಸರಿಯಬೇಕೆಂದು ಬಯಸುವವರು.